ಪ: ಸ್ಥಾಪನೆ: 1918 REGD NO. EG358

ಕಂಠೀರವ
KANTEERAVA WEEKLY

For
Artistic Printing & Book Binding
Please pay a visit to:
MANGALORE PRESS
Car Street, MANGALORE-1.

ಚಂದಾ ದರ: 'ಕಂಠೀರವ'—
ಸ್ಥಳೀಯರಿಗೆ ರೂ. 4.
ಪರ ಸ್ಥಳೀಯರಿಗೆ ರೂ. 5.
ಬಿಡಿ ಸಂಚಿಕೆ: 9 ನಯೆ ಪೈಸೆ(ರೂ. 0—1—6)
ಕಾರ್ಯಾಲಯ: ರಥಬೀದಿ, ಮಂಗಳೂರು

MANGALORE] 28—2—1961
Vol. ಸಂಪುಟ 42] [No. ಸಂಚಿಕೆ 45

ಅದಿಷ್ಟು ಇದಿಷ್ಟು

ಮೈಸೂರು ಕಾಂಗ್ರೆಸ್ ರಾಜಕೀಯ

ಈ ರಾಜಕೀಯದಲ್ಲಿನ ಇದುವರೆಗಿನ ಒಳ ಹೊರಗಿನ ಹೋರಾಟ ಈಗ 'ಬಹಳ ಮಟ್ಟಿಗೆ ಪರಿಹಾರ' ಕಂಡಂತಾಯಿತು.

ಶ್ರೀ ನಿಜಲಿಂಗಪ್ಪ ಅವರ ಮಂತ್ರಿ ಮಂಡಲದಲ್ಲಿದ್ದ ಮೂವರು ಮಂತ್ರಿಗಳು, ಮತ್ತೊಬ್ಬ ಉಪ ಮಂತ್ರಿಗಳನ್ನು ಈ ಮಂತ್ರಿಮಂಡಲಕ್ಕೆ ಸೇರಿಸಿಕೊಂಡು ಆ ಮಂಡಲದ ಮಂತ್ರಿ ಸಂಖ್ಯೆಯನ್ನು ೧೦ ರಿಂದ ೧೪ಕ್ಕೆ ಈಗ ಏರಿಸಲಾಗಿದೆ. ಅದೀಗ ಪರಿಹಾರ!

ಇದು ವರೆಗಿನ ಇತ್ತಂಡದ ಜಗಳದಲ್ಲಿ ಯಾರೂ ಸೋತಿಲ್ಲ. ಜತ್ತಿ ಮಂತ್ರಿ ಮಂಡಲ ಹಾಗೇ ಉಳಿದಿದೆ. ಇತ್ತ ಭಿನ್ನ ಮತೀಯರ ಪರವಾಗಿ ನಾಲ್ಕು ಮಂದಿ ಮಂತ್ರಿಗಳೂ ಬಂದು ಆ ಮಂಡಲಕ್ಕೆ ಸೇರಿಕೊಂಡಿದ್ದಾರೆ. ಇತ್ತಂಡಕ್ಕೂ ಇದು ತೃಪ್ತಿಕರ.

ರಾಜ್ಯದ ಪ್ರಜೆಗಳಿಗೆ ಮಂತ್ರಿಮಂಡಲದ ವಿಸ್ತರಣೆ ಮಂತ್ರಿ ಸಂಖ್ಯೆಯ ಬೆಳವಣಿಗೆ ಇವುಗಳಿಗಿಂತ ಮುಖ್ಯ ಉತ್ತಮ ಆಡಳಿತ, ಒಳ್ಳೆಯ ಸಮರ್ಥ ಸರಕಾರ ಎಂಬ ದೊಡ್ಡ ಮಾತಿಲ್ಲಿ ಆಡಬೇಕಾಗಿದೆ.

ಎಂದೋ ಆಗಬೇಕಾಗಿದ್ದ ಈ ವಿಸ್ತರಣ ಕಾರ್ಯದಿಂದ ಇನ್ನಾದರೂ ರಾಜ್ಯದಲ್ಲಿ ಆಡಳಿತ ಕಾರ್ಯ ಉತ್ತಮವಾಗುತ್ತ ಬಂದರೆ ರಾಜ್ಯದ ಪ್ರಜೆಗಳಿಗೆ ತುಂಬ ಸಂತೋಷವಾದೀತು.

ಈ ವಿವೇಕದ ಕೆಲಸ ಮೊದಲೇ ಆಗಿ ಹೋಗಿದ್ದರೆ ಎಷ್ಟು ಚೆನ್ನಾಗಿತ್ತು! ಮಹಾ ಚುನಾವಣೆಯಲ್ಲಿ ಕಾಂಗ್ರೆಸಿನ ಇತ್ತಂಡದ ವರ ವಿವಾದಗಳಿಂದ ಪಾರ್ಟಿಗೆ ಪೆಟ್ಟು ಬೀಳಬಾರದೆಂಬ ಈ ದೃಷ್ಟಿಯೇ ೧೧ನೇ ತಾಸಿನ ಈಗಿನ ವಿಸ್ತರಣೆಯ ಕಾರ್ಯದಲ್ಲಿ ಪ್ರಧಾನಾಂಶವಾಗಿತ್ತು; ಅನಿರ್ವಾಹ ಪಕ್ಷದಿಂದ ಹೀಗೆ ಮಾಡಬೇಕಾಯಿತು ಎಂಬ ಮಾತಿನ ವಾಸಿ ಆಗ ತಪ್ಪುತ್ತಿತ್ತು.

ಈಗಿನ ಮಂತ್ರಿಮಂಡಲದ ವ್ಯವಸ್ಥೆಯಿಂದ ಬಲವಾದ ಎರಡು ಕಾಂಗ್ರೆಸ್ ಗುಂಪುಗಳು ಒಂದುಗೂಡಿತೆನ್ನಬಹುದು. ಆದರೆ ಕಾಂಗ್ರೆಸಿನ ಎಲ್ಲ ಒಳ ಗುಂಪುಗಳಿಗೂ ಈ ಹೊಸ ಮಂತ್ರಿಗಳ ಆಯ್ಕೆಯಿಂದ ಸಮಾಧಾನವಾಗಿದೆಯೇನೋ ತಿಳಿಯದು.

ಹೇಗೂ ವಿವಾದದ ದೊಡ್ಡ ರೆಕ್ಕೆಗಳು ಎರಡು ಈವೊತ್ತು ಶಕ್ತಿಯುಕ್ತವಾಗಿರುವ ಕಾರಣ ಸಣ್ಣ ಒಳಗುಂಪುಗಳಿಗೆ ಒಂದು ವೇಳೆ ಅತೃಪ್ತಿ ಇದ್ದರೂ ಅದು ಪ್ರಯೋಜನಕ್ಕೆ ಬೀಳದು.

ಸದ್ಯ ನಮ್ಮ ಮಂತ್ರಿಮಂಡಲ ಹೊಸ ಸ್ಫೂರ್ತಿಯೊಡನೆ ಕೆಲಸ ಮಾಡಿ ಆಡಳಿತ ಕಾರ್ಯದಲ್ಲಿನ 'ವಿಳಂಬ'ವನ್ನು ತಪ್ಪಿಸಲು ಯಾವುದು ಸೂಕ್ತ ಮಾರ್ಗವೋ ಅದನ್ನೇ ರೂಪಿಸಿಕೊಂಡು ಅಧಿಕಾರಿ ವರ್ಗದ ಮೇಲೆ ತಕ್ಕ ಹಿಡಿತಡೆಯನ್ನು ಇರಿಸಿಕೊಳ್ಳುವಲ್ಲಿ ಹಿಂದಾಗದೆಂದು ಹಾರೈಸಬಹುದೇ?

ಜಿಲ್ಲೆಯ ಅಭಿವೃದ್ಧಿ ಕಾರ್ಯಗಳು

ಜಿಲ್ಲೆಯ ಅಭಿವೃದ್ಧಿ ಕಾರ್ಯಗಳ ಕುರಿತು ಆಗಾಗ ಇಲಾಖಾಧಿಕಾರಿಗಳ ವರದಿಗಳಿಂದ ತಿಳಿದುಕೊಳ್ಳುವ ಸಂದರ್ಭಗಳಿವೆಯಾದರೂ ಆಡಳಿತದ ಪಾರ್ಟಿಯ ಜಿಲ್ಲಾ ಜನಪ್ರತಿನಿಧಿಗಳು ಅನುಗಳಲ್ಲಿ ಯಾವ ಪಾತ್ರ ವಹಿಸಿದ್ದಾರೆಂದು ಅರಿಯುವ ಸಂದರ್ಭಗಳು ತೀರ ಸ್ವಲ್ಪ.

ಅಂಥ ಒಂದು ಅವಕಾಶವನ್ನು ಮಂಗಳೂರು ಸಿಟಿ ಕನ್ವೆನ್ಶನಿನವರು ಈಚೆಗೆ ಒದಗಿಸಿ ಕೊಟ್ಟಿದ್ದು ಕಾಲೋಚಿತವಾಗಿದೆ.

ಶ್ರೀ ಬಿ. ವೈಕುಂಠ ಬಾಳಿಗರು ಕಳೆದೆರಡು ಯೋಜನೆಗಳಲ್ಲಿ ಆದ ತಮ್ಮ ಮತದಾರ ಕ್ಷೇತ್ರದ ಸಾಧನೆಗಳನ್ನು ವಿವರಿಸುತ್ತ ಅದರೊಡನೊಂದು ಜಿಲ್ಲೆಯದೂ ಆಧಾರಪೂರ್ವಕವಾದ ಚಿತ್ರವನ್ನು ಮುಂದಿಟ್ಟರು.

ನಿದ್ದೃಷ್ಟಕ್ಕೆ ಸೆಟ್ಟು ಸರಬರಾಯಿ ಇತ್ಯಾದಿ ಸಾಮಾನ್ಯ ವಿಷಯಗ್ರಹಿಕೆಯೊಡನೆ ಮಂಗಳೂರು ಬಂದರ, ಮಂಗಳೂರು—ಹಾಸನ ರೈಲ್ವೆಗಳಂಥ ದೊಡ್ಡ ವಿಚಾರಗಳ ಪರಿಸ್ಥಿತಿ ಈಗೇನಾಗಿದೆ ಯಾವ ಹಂತಕ್ಕೆ ಬಂದು ತಲುಪಿದೆ ಎಂದೂ ಅವರು ಶ್ರುತಪಡಿಸಿದರು.

ಜಿಲ್ಲೆಯ ಜನಪ್ರತಿನಿಧಿಗಳೆಲ್ಲ ಒಗ್ಗಟ್ಟಾಗಿ ಕೆಲಸ ಮಾಡುತ್ತಿರುವುದರಿಂದ ಅದರ ಪ್ರಯೋಜನ ಆಗಲೇ ಕೆಲಮಟ್ಟಿಗೆ ನಮಗೆ ದೊರಕಿದೆ, ಇನ್ನೂ ದೊರಕಬಹುದಾಗಿದೆ ಎಂಬುದು ಅವರ ನುಡಿಗಳಿಂದ ತಿಳಿಯಬಹುದಾದ ಒಂದು ಮುಖ್ಯಾಂಶ.

ಮಾಡಬೇಕಾದ ಕೆಲಸದಲ್ಲಿ ಅಡಚಣೆಗಳು ಹಲವು ಎಂದು ಅವರೆಂದಿರುವುದರಿಂದ ನಾವು ಮುಂದೆ ವರ್ತಿಸಬೇಕಾದ ರೀತಿಯ ವಿಷಯದಲ್ಲಿ ಬಹು ಆಳವಾಗಿ ಯೋಚಿಸಬೇಕಾದ ಆವಶ್ಯಕತೆ ಇದೆ. ಏತಕ್ಕೆಂದರೆ ಮುಂದೆ ಅನೇಕ ಕೆಲಸಗಳು ಅವರೇ ಹೇಳುವಂತೆ ಇಲ್ಲಿ ಆಗಬೇಕಾಗಿವೆ.

ನಾವು ಯಾವ ಕಾರ್ಯಸಾಧನೆಗಾಗಿ ಯತ್ನಿಸಿದರೂ ಅದರಲ್ಲಿ ನಾವು ಯಶಸ್ವಿಗಳಾಗುತ್ತೇವೆ ಎಂಬ ಇತರರ ಹಂಗಣೆಯ ರೂಪದ ಬಹುಮಾನ ನಮಗೆ ಇದೆ ಎಂಬುದಕ್ಕಾಗಿ ಶ್ರೀ ಬಾಳಿಗರು ಹೇಳುವಾಗಲೇ ಈ ಜಿಲ್ಲೆ ವರ್ಷಕ್ಕೆ ರೂ. ೨೪ ಲಕ್ಷ ಅಧಿಕ ಕಂದಾಯ [illegible] ಲಗನ್ನು ತೆರುತ್ತಿದೆ ಎಂದೂ [illegible] ಸ್ಮರಣೆಗೆ ತಂದು ಕೊಟ್ಟರು.

ಮೈಸೂರು ರಾಜ್ಯವಾಗಿ ಇಷ್ಟು ವರ್ಷಗಳಾದರೂ "ಮದ್ರಾಸಿನ ಆಡಳಿತ ಕ್ರಮ"ದ ಕಾಯಿದೆಗಳಿನ್ನೂ ಕೆಲವು ಮೈಸೂರಲ್ಲಿ ಜಾರಿಯಲ್ಲಿರುವುದು ನಮ್ಮವರ ದೌರ್ಬಲ್ಯದ ಒಂದು ಸಂಕೇತವೆನ್ನಬೇಕು.

ಅಂತೇ "ಹಳೇ ಮೈಸೂರು" "ಹೊಸ ಮೈಸೂರು" ಎಂಬ ಇವೆರಡು ಮೈಸೂರಿನ ಜಾತಿಗಳೂ ಇನ್ನೂ ಅಸ್ತಿತ್ವದಲ್ಲಿರುವುದು ಲಜ್ಜಾಸ್ಪದ.

ಈಗ ಜಗಳ ಮುಗಿಸಿಕೊಂಡಂತಿರುವ ನಮ್ಮ ವಿಸ್ತೃತ ಮಂತ್ರಿಮಂಡಲವಾದರೂ ಹಿಂದೆ ಆ ಜಗಳಕ್ಕಾಗಿ ಉಪಯೋಗಿಸಿಕೊಂಡಷ್ಟು ಸಮಯವನ್ನು "ಮೈಸೂರು ರಾಜ್ಯಕ್ಕೆ ಸ್ವತಂತ್ರವಾದ ಎಲ್ಲ ಶಾಸನ"ಗಳನ್ನು ರಚಿಸಿಕೊಳ್ಳಲೂ "ಮೈಸೂರು ರಾಜ್ಯ ಎರಡಲ್ಲ ಒಂದೇ" ಎಂದು ರೂಪಿಸಿಕೊಳ್ಳಲೂ ವಿನಿಯೋಗಿಸಿ "ಮೈ[illegible] ಸರಕಾರ"ವೆಂದು [illegible] ಜಿಲ್ಲೆಯಲ್ಲಿ ರೂಢಿ ಬಂದಿರುವ ಆ ಅಪಾರ್ಥ ಕಲ್ಪನೆಯ ಮಾತನ್ನು ತೊಡೆದು ಹಾಕಲು ಯತ್ನಿಸಬಾರದೇ?

— —



ಕಲ್ಕತ್ತಾ ಬಳಿ ಬೆರಕ್‌ಪುರ ಮತ್ಸ್ಯ ಸಂಶೋಧನಾ ಕೇಂದ್ರದಲ್ಲಿ

ಸಾಹಿತ್ಯದ ಧರ್ಮ

'ಸಾಹಿತ್ಯ' ಜನಾಭಿರುಚಿಯ ವಸ್ತುವಲ್ಲ;
ಜನತೆಗೆ ಉತ್ತಮ ಅಭಿರುಚಿಯನ್ನು ಹುಟ್ಟಿಸುವ ವಸ್ತು;
ಶ್ರೀ ಮುಗಳಿಯವರ ವಕ್ತೃತನ್ನು ನಾವು ಅನ್ವಯಿಸಿಕೊಳ್ಳಬೇಕು!
ರಂ. ಶ್ರೀ. ಮುಗಳಿಯವರ ಮಾತು

(ಬರೆದವರು: ಶ್ರೀ ಕೆ. ಎಸ್. ಪದ್ಮನಾಭಾಚಾರ್ಯ, ವಿದ್ವಾನ್)

ಕತೆ ಕಾದಂಬರಿಗಳನ್ನು ಬರೆದು, ಸಾಹಿತ್ಯದ ಆ ರೂಪವನ್ನು ಪ್ರಸಾರ ಮಾಡಿದ ಒಂದು ಚಿಕ್ಕ ಗುಂಪು, ಇತ್ತೀಚಿಗೆ ಸಾಹಿತ್ಯ ರಂಗದಲ್ಲಿ ಸೆಟೆದು ನಿಂತಂತಿದೆ. 'ಅವರೂ ಸಾಹಿತಿಗಳು' ಎಂದು ನಾವೂ ಒಪ್ಪ ಬೇಕು. 'ಅವರ ಕಾರ್ಯವೂ ಜನತೆಯಲ್ಲಿ ಉತ್ತಮ ಸಂಸ್ಕಾರವನ್ನು ಹುಟ್ಟಿಸುವಂಥಹದು' ಎಂಬುದನ್ನು ನಾವೂ ಒಪ್ಪಬೇಕು. ಅಸ್ತರಂತೆ ಕತೆ ಕಾದಂಬರಿಗಳೂ ಸಾಹಿತ್ಯದ ಆ ಗುಣವನ್ನು ಹೊಂದಿಕೊಂಡಿರಬೇಕು. ಅಂದರೆ ಜನರಿಗೆ ಉತ್ತಮ ಸಂಸ್ಕಾರವನ್ನು ಆ ಸಾಹಿತಿಗಳು ಕೊಡುವವರಾಗಿರಬೇಕು. ಆ ಕಾರಣದಿಂದಲೇ ಕತೆ ಕಾದಂಬರಿಗಳು ವಿಪುಲವಾಗಿ ಬೆಳೆದಾಗ, 'ಅಶ್ಲೀಲ ಸಾಹಿತ್ಯ ಉಂಟಾಗದಿರಲಿ' ಎಂಬ ಕೂಗು ಹಬ್ಬಿತ್ತು.

ಜನ ಸುಸಂಸ್ಕೃತರಾಗಿ ಬರುತ್ತಿರುವಂತೆ ಅವರ ಆ ಸಂಸ್ಕಾರವನ್ನು ಕಾಪಾಡಿಕೊಂಡು ಹೋಗುವ ಕಾರ್ಯವನ್ನೇ ಸಾಹಿತ್ಯ ಮಾಡಬೇಕಾಗುತ್ತದೆ. ಆ ಕಾರ್ಯವನ್ನೇ ಸಾಹಿತಿಗಳೂ ಮಾಡಬೇಕಾಗುತ್ತದೆ. ಅದು ವಿನಹ 'ಜನ ಬಯಸುವುದನ್ನೆಲ್ಲಾ ನಾವು ಸಾಹಿತ್ಯದಿಂದ ಕೊಟ್ಟು ಬಿಡುತ್ತೇವೆ" ಎಂದು ಸಾಹಿತಿ ಹೊರಟರೆ ಪ್ರಮಾದವಾದೀತು. ಆದ್ದರಿಂದಲೇ ಜನ ಹಿತ ಬಯಸುವ ಅರ್ಥದಲ್ಲಿರುವ ಸಾಹಿತಿಗಳು ಜಾಗ್ರತೆ ತಾಳುತ್ತಾರೆ.

ಂ ಂಂ ಂ

ಒಂದೊಮ್ಮೆ, ಒಂದೆಡೆ, ಒಂದು ಸಂಘದ ಕಡೆಯಿಂದ ಅಭಿನಯಿಸಿದ ಒಂದು ನಾಟಕಕ್ಕೆ ಅಂದಿನ ಒಂದು ಸಭೆಯ ಅಧ್ಯಕ್ಷತೆ ವಹಿಸಿದ ನಮ್ಮ ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ ರಂ. ಶ್ರೀ ಮುಗಳಿಯವರು ಬಂದಿದ್ದರು.

ಆ ನಾಟಕ ಬರೆದವರು ಅಲ್ಲಿಯ ಒಬ್ಬ ಜನಪ್ರೀತ ಪ್ರತಿಭಾನ್ವಿತ ವ್ಯಕ್ತಿಯಾಗಿದ್ದರು. ಅದರ ಅಭಿನೇತೃಗಳು ಅಲ್ಲಿಯ ಪುರ ಪ್ರಮುಖರು. ಬಹಳ ಚಟುವಟಿಕೆಯ ವ್ಯಕ್ತಿಗಳು. ಆದಲೇ ಕುತೂಹಲದಿಂದ ಸೇರಿದ್ದ ಜನ ಕಿಕ್ಕಿರಿದು ಬಂದಿತ್ತು.

ನಾಟಕ ಪ್ರಾರಂಭವಾಯಿತು. ಸಾಮಾನ್ಯ ಐದು ನಿಮಿಷಕ್ಕೆ ಎನ್ನುವಂತೆ ಜನ ನಗೆಗಡಲಲ್ಲಿ ಓಡಾಡುತ್ತಿತ್ತು. ನಾಟಕದ ಸುಮಾರು ಮೂರು ಗಂಟೆ ಹೊತ್ತೂ ಜನ ಒಂದೇ ಸವನೆ ಸಂತೋಷವನ್ನು ಅನುಭವಿಸುತ್ತಿತ್ತು.

ಜನವೆಲ್ಲಾ ನಾಟಕವನ್ನು ಹೊಗಳಿತು. ನಾಟಕ ರಚಯಿತರನ್ನು ಕೊಂಡಾಡಿತು. ಆ ಅಭಿಪ್ರಾಯಕ್ಕೆ ತಕ್ಕಂತೆ ಉತ್ತಮ ಅಭಿನಯ ನೀಡಿದ ಆ ಅಭಿನೇತೃಗಳನ್ನು ಬಹಳವಾಗಿ ಮೆಚ್ಚಿ ಮಾತಾಡಿತು. ಎಲ್ಲವೂ ಆಯಿತು. ನಾಟಕ ಮುಗಿಯಿತು. ಪ್ರೇಕ್ಷಕ ವೃಂದ ತೆರಳುತ್ತಿತ್ತು! ರಂಗ ಸಜ್ಜಿಕೆಯ ಕೋಣೆಯಲ್ಲಿ ಪಾತ್ರವರ್ಗ ಪಾತ್ರವನ್ನು ಕಳೆದು ತನ್ನತನಕ್ಕೆ ಪಡೆಯಿತು.

ಅಷ್ಟರಲ್ಲಿ ಶ್ರೀ ಮುಗಳಿಯವರೂ ತನ್ನ ಮಿತ್ರರಿಂದೊಡಗೂಡಿ, ರಂಗ ಸಜ್ಜಿಕೆಯ ಕೋಣೆಯೊಳಕ್ಕೆ ಬಂದರು. ಅಭಿನೇತೃಗಳು ಅವರ ಪಾತ್ರಗಳನ್ನು ಕಂಡರು. ಬಾಯಿ ತುಂಬಾ ಹೊಗಳಿದರು. ಎಲ್ಲಾ ಮುಗಿದ ಮೇಲೆ 'ರಚಯಿತರೆಲ್ಲಿ?' ಎಂದರು. ಬೆಂದೆಡೆ ಇದ್ದ ಅವರು ವಿನೀತರಾಗಿ ಬಂದು ಕೈ ಮುಗಿದರು.

ಶ್ರೀ ಮುಗಳಿಯವರು, ಯುವಕರಾದ ಅವರ ಬೆನ್ನನ್ನು ಚಪ್ಪರಿಸುತ್ತಾ, 'ನಾಟಕ ಚಲೋದಾಗಿ ಬರೆದಿದ್ದೀರಿ. ನಿಮಗೆ ಇರುವ ಆ ಶಕ್ತಿಯನ್ನು ಮೆಚ್ಚಿದ್ದೇನೆ. ಅಭಿನಂದಿಸುತ್ತಿದ್ದೇನೆ!' ಎಂದರು. 'ಎಲ್ಲವೂ ತಮ್ಮಂತಹ ಹಿರಿಯ ಸಾಹಿತಿಗಳ ಆಶೀರ್ವಾದ!' ಎಂದರು ವಿನೀತರಾಗಿ ಕೈ ಜೋಡಿಸಿಕೊಂಡು ರಚಯಿತರು!

'ನಿಮ್ಮಲ್ಲಿ ಹುದುಗಿರುವ ಈ ಶಕ್ತಿಗೆ ನಾನು ತುಂಬು ಹೃದಯದಿಂದ ಆಶೀರ್ವಾದ ಮಾಡುತ್ತೇನೆ ಆದರೆ, ಆ ಶಕ್ತಿ ಸಮಾಜವನ್ನು ಪರಿಷ್ಕರಿಸುವ ಧಾಟಿಯಿಂದ ಸಾಗಲಿ' ಎಂದು ಆಶೀರ್ವಾದ ಮಾಡುತ್ತಿದ್ದೇನೆ!' ಎಂದರು!

ನಾವೆಲ್ಲಾ ಆಗ ಅಲ್ಲಿ ಕೇಳುತ್ತಾ ನಿಂತಿದ್ದವು; 'ಇದೇನು ಈ ಮಾತು?' ಎಂದು ಕೂಡಾ ಅಚ್ಚರಿ ಪಡುತ್ತಿದ್ದವು. ರಚಯಿತರೂ, ಒಮ್ಮೆ ಬೆಚ್ಚಿಬಿದ್ದವರಂತಾಗಿ, 'ಅಂದರೆ ಅರ್ಥವಾಗಿಲ್ಲ!' ಎಂದರು. 'ಅಂದರೆ ನಾನೀ ನಾಟಕವನ್ನು, ಚಮತ್ಕಾರವಾಗಿ ಅಭಿನಯಿಸಿದ ಈ ನಾಟಕವನ್ನು, ಜನವೆಲ್ಲಾ ಬಹಳವಾಗಿ ಮೆಚ್ಚಿದ ಈ ನಾಟಕವನ್ನು ಆಶೀರ್ವದಿಸುವುದಿಲ್ಲ! ಇದು ಅದರ ಅರ್ಥ!' ಎಂದರು ಶ್ರೀ ಮುಗಳಿಯವರು.

ಇದ್ದವರ ಕುತೂಹಲ ಮತ್ತೂ ಕೆರಳಿತು. ರಚಯಿತರೂ, 'ತಾವು ಅವಶ್ಯ ದೋಷವನ್ನು ತಿಳಿಸಬೇಕು. ಒಪ್ಪುವುದಕ್ಕೆ ಸಿದ್ಧನಿದ್ದೇನೆ!' ಎಂದರು! 'ನಾನು ಹೇಳಿದ ದೋಷವನ್ನು ತಿದ್ದಿಕೊಳ್ಳುವ ಹೃದಯ ನಿಮಗಿದೆ ಎಂದು ನಾನು ನಂಬಲೇ' ಎಂದು ಕೇಳಿದರು ಮುಗಳಿಯವರು. 'ಸಂದೇಹವೇಕೆ! ಈಗಲೇ ತಮ್ಮ ಮುಂದೆಯೇ ಪ್ರತಿಜ್ಞೆ ಮಾಡಿ ಹೇಳುವೆ!' ಎಂದರು ರಚಿಯಿತರು.

"ನೋಡಿ! ಜನವೆಲ್ಲಾ ಮಾತು ಮಾತಿಗೂ ನಗುತ್ತಿತ್ತು. ಕಾರಣವೇನು ಗೊತ್ತೇ? ನೀವು ಪ್ರತಿ ಸನ್ನಿವೇಶವನ್ನು ಚಮತ್ಕಾರವಾದ ಶೃಂಗಾರಭರಿತ ಮಾತುಗಳಿಂದ ಜೋಡಿಸಿದ್ದೀರಿ. ಶೃಂಗಾರ ಚೇಷ್ಟೆಯ ಅಭಿನಯಕ್ಕೆ ಬೇಕಷ್ಟು ಆಸ್ಪದ ಕೊಟ್ಟೀರಿ, ಆ ಮಾತುಗಳನ್ನು ಅದಕ್ಕೆ ಅನುಕೂಲವಾಗಿ ಸುಂದರವಾಗಿ ಬೆಸಿಸಿದ್ದೀರಿ. ಅದೇ ರೀತಿ, ದೃಶ್ಯವನ್ನು, ಪಾತ್ರವನ್ನೂ ಸುಂದರಗೊಳಿಸಿದ್ದೀರಿ.

'ಅದಕ್ಕಾಗಿಯೇ ಜನ ಅದನ್ನು ಚೆನ್ನಾಗಿಯೇ ಮೆಚ್ಚಿತು. ಅಂದರೆ, ಜನ ಸಮೂಹದ ಅವರ ಆ ಸ್ವಾಭಾವಿಕ ಶೃಂಗಾರ ಬಯಕೆಗೆ, ಅಲ್ಲಿ ಸಮಾಧಾನ ದೊರಕಿತು. ಅವರ ಶೃಂಗಾರಿಕ ಬಯಕೆಯನ್ನು ಪ್ರಚೋದಿಸುವ ಅದನ್ನು ಪ್ರಜ್ವಲಗೊಳಿಸುವ ಹಾಗೂ ತೃಪ್ತಿಗೊಳಿಸುವ ಒಂದು ವಿಧಾನ ಅಲ್ಲಿ ಅವರಿಗೆ ಸಿಕ್ಕಿತು.

'ಅದೂ ಬೇಕು ಅದೂ ಇರಲಿ. ಆದರೆ ಅದು ನವರಸಗಳ ನಡುನಡುವೆ ನಡುನಡುವೆ ಬರುವ ಒಂದೆರಡು ಶೃಂಗಾರ ಪರ ದೃಶ್ಯಗಳ ನಡುವೆ ಹಿತವಾಗಿ ಮಿತವಾಗಿ ಹತ್ತಾರು ಕಡೆಗಳಲ್ಲಿ ಬರಬೇಕು. ಬೇರೆ ಬೇರೆ ಸನ್ನಿವೇಶಗಳನ್ನು ಬೇರೆ ಬೇರೆ ರಸಗಳಿಂದ ಕೂಡಿಸಿ, ಪ್ರತಿ ದೃಶ್ಯವನ್ನು ಪ್ರತಿ ಪಾತ್ರವನ್ನು ಪರಿಪೂರ್ಣಗೊಳಿಸಬೇಕು.

'ಆಗ ವಿವಿಧ ರಸಗಳ ಸೇವನೆಯಿಂದ ಅದರ ಆನಂದದ ಅನುಭವ ಹೃದಯಕ್ಕೆ ಸಿಗುವಾಗ ಮಾತ್ರ ಪ್ರೇಕ್ಷಕರ ಹೃದಯದಲ್ಲಿ ಒಂದು ವ್ಯಕ್ತಿತ್ವದ ಪರಿಪಾಕ ಉಂಟಾಗುತ್ತದೆ. ಆಗ ವ್ಯಕ್ತಿ ಪರಿಷ್ಕೃತನಾಗಿ

(ಮುಂದಿನ ಪುಟ ನೋಡಿ)

ಪಿಗ್ಮಿ ಠೇವಣಿ

ಮಾನವನನ್ನು ಅಭ್ಯಾಸದ ಶಿಶುವೆಂದು ಸಹಾ ಹೇಳುವುದುಂಟು. ಪದೇ ಪದೇ ಆಚರಿಸಿ ರೂಢಿಯಾಗಿ, ಚಟವಾಗಿ, ಅಭ್ಯಾಸವಾಗಿ ಬಲಿತು ನಿಂತ ಕ್ರಿಯೆಯನ್ನು ಹಠಾತ್ತಾಗಿ ಕಿತ್ತೊಗೆಯುವುದು, ನಿಲ್ಲಿಸಿಬಿಡುವುದು ಅಸಾಧ್ಯವಾದ ಕೆಲಸ. ಹೀಗೆ ಮಾಡುವುದರಿಂದ ದೇಹ ಮನಸ್ಸುಗಳಿಗೆ ಆಘಾತ ಕೂಡಾ ಸಂಭವಿಸಬಹುದು. ಈ ಅನುಭವ "ಮಾನವನು ಅಭ್ಯಾಸದ ಕೈಗೂಸು" ಎಂಬ ಮಾತನ್ನು ಪುಷ್ಟೀಕರಿಸುತ್ತದೆ.

ಒಳ್ಳೆಯ ಯೋಚನೆ, ಒಳ್ಳೆಯ ಕೆಲಸಗಳನ್ನು ತಿರುಗಿ ತಿರುಗಿ ನಡೆಸುವುದರಿಂದ ಅವು ಒಳ್ಳೆಯ ಅಭ್ಯಾಸಗಳಾಗಿ ಪರಿಣಮಿಸುತ್ತವೆ. ಕೈಗೆ ಬಂದ ಪುಡಿಕಾಸುಗಳನ್ನು ತಾತ್ಸಾರದಿಂದ ಕಂಡು ಮನಬಂದಂತೆ ವೆಚ್ಚ ಮಾಡುತ್ತಾ ಹೋದರೆ ಅನಾವಶ್ಯಕವಾಗಿ ಹಣವನ್ನು ಪೋಲುಮಾಡುವ ಚಟವು ಪ್ರಭಲಿಸುತ್ತದೆ. ಬದಲಾಗಿ ಚಿಲ್ಲರೆ ಪುಡಿಕಾಸುಗಳನ್ನು ಸಹಾ ವ್ಯವಸ್ಥಿತವಾಗಿ ಕೂಡಿಡುತ್ತಾ ಹೋದರೆ ಉಳಿತಾಯದ ಅಭ್ಯಾಸ ನೆಲೆಯೂರುತ್ತದೆ. ಇದು ಒಂದು ಒಳ್ಳೆಯ ಅಭ್ಯಾಸವನ್ನು ಮಾತ್ರವಲ್ಲ ಒಂದು ಪುಟ್ಟ ನಿಧಿಯನ್ನು ದೊರಕಿಸಿಕೊಡುತ್ತದೆ.

ದಿನಕ್ಕೆ ೨೫ ನಯೆಪೈಸೆಗಳಷ್ಟನ್ನು
ಸಹಾ ವ್ಯವಸ್ಥಿತವಾಗಿ ಕೂಡಿಡಲು

ಪಿಗ್ಮಿ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಶ್ರೀ ಲಕ್ಷ್ಮೀ ಟ್ರಾನ್ಸ್‌ಪೋರ್ಟ್ ಸರ್ವೀಸ್, ಮಂಗಳೂರು.

ಜಿಲ್ಲೆಯಲ್ಲಿ ಗೂಡ್ಸ್ ಮತ್ತು ಪಾರ್ಸೆಲು ಗಳನ್ನೊಯ್ಯುವ ಸರ್ವೀಸು.

ಟೆಲಿಫೋನ್ ನಂಬ್ರ ಕದ್ರಿ 165. ಬಂದರ ಆಫೀಸು ಟೆಲಿಫೋನ್ ನಂಬ್ರ: 487
ಕುಂದಾಪುರ: 28.

ಜಿಲ್ಲೆಯಲ್ಲಿ ಪದಾರ್ಥಗಳನ್ನು ಸಾಗಿಸಲು, ಸಾರ್ವಜನಿಕರಿಗೆ ತಕ್ಕ ಸೌಕರ್ಯಗಳನ್ನು ಒದಗಿಸಿ ಕೊಡುವುದೇ ಈ ಸರ್ವೀಸಿನ ಮುಖ್ಯ ಉದ್ದೇಶ.

ಸರ್ವೀಸ್ ಲ್ಯಾನುಗಳು

ಸೋಮವಾರ	ಕೊಲ್ಲಮೊಗ್ರು, ಸಂಪಾಜೆ, ಮುಂಡಾಜೆ, ಸುಬ್ರಮಣ್ಯ, ಮಂಗಲಪಾಡಿ
ಮಂಗಳವಾರ	ಕುಂದಾಪುರ, ಮಂಜೇಶ್ವರ, ಎಲಿಮಲೆ, ಹೊಸಮಠ ಸುಬ್ರಮಣ್ಯ
ಬುಧವಾರ	ಉಡುಪಿ, ಕೊಲ್ಲಮೊಗ್ರು, ಕುಂಟಾರು, ಗಾಡಿಗುಡ್ಡೆ, ಮೂಡೂರು
ಗುರುವಾರ	ಸುಬ್ರಮಣ್ಯ, ಧರ್ಮಸ್ಥಳ, ಪಾಣಾಜೆ, ಕ್ರಾಂತಿಲ.
ಶುಕ್ರವಾರ	ಕುಂದಾಪುರ, ಮುಂಡಾಜೆ, ಕಾಸರಗೋಡು, ಮಂಗಲಪಾಡಿ.
ಶನಿವಾರ	ಎಲಿಮಲೆ, ಮಂಜೇಶ್ವರ, ಕುಂಟಾರು, ಗಾಡಿಗುಡ್ಡೆ, ಹತ್ಯಡ್ಕ.

ಹೋಸ್ಪಲ್ ಇಲಾಖೆಗೆ ಬಾಧಕವಿಲ್ಲದ ಯಾವತ್ತೂ ಪಾರ್ಸೆಲುಗಳನ್ನು ಸ್ವೀಕರಿಸಲಾಗುತ್ತದೆ. ಸಾರ್ವಜನಿಕರ ಕೇಳಿಕೆ ಇದ್ದರೆ ಇತರ ಕಡೆಗಳಿಗೂ ವಿಸ್ತರಿಸುವುದು.

ಗೂಡ್ಸ್ ಬುಕ್ಕಿಂಗ್ ಆಫೀಸು, ಬಂದರು, ಮಂಗಳೂರು.

ಮಂಗಳೂರು, 15—6—58

೪೨] ಮಂಗಳೂರು, ತಾರೀಕು ೨೮—೨—೧೯೬೧ [೪೫
ಶಾರ್ವರಿ ನಾಮ ಸಂವತ್ಸರದ ಫಾಲ್ಗುಣ ಶು। ೧೪ ಮಂಗಳವಾರ

ಮೈಸೂರಿನ ಮುನ್ನಡೆ

ಮೈಸೂರು ಶಾಸನ ಸಭಾ ಉಭಯ ಮಂದಿರಗಳ ಜತೆ ಅಧಿವೇಶನವನ್ನು ಉದ್ದೇಶಿಸಿ ಅಲ್ಲಿನ ಗವರ್ನರ್ ಶ್ರೀ ಜಯಚಾಮರಾಜ ವೊಡೆಯರ್ ಅವರು ವಾಡಿಕೆಯಂತೆ ಭಾಷಣ ಮಾಡಿದರು. ಭಾಷಣದಲ್ಲಿ ಮೈಸೂರಿನ ಮುನ್ನಡೆಯ ಕುರಿತು ಅವರು ವಿಶದೀಕರಿಸಿದರು. ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ದಾನ ಮಾಡಿದ, ಆರೋಗ್ಯ ಸೇವಾ ಕ್ರಮವನ್ನು ವಿಸ್ತರಿಸಿದ ಸಂಗತಿಗಳನ್ನು ಅವರು ಪ್ರಸ್ತಾವಿಸಿ, ಆಹಾರ ಸಂಗ್ರಹ ಸಾಕಷ್ಟಿದೆ, ಮೂರನೆ ಯೋಜನೆಯ ಅವಧಿಯಲ್ಲಿ ಹತ್ತು ಲಕ್ಷ ಟನ್ನುಗಳಷ್ಟು ಧಾನ್ಯಗಳನ್ನು ರಾಜ್ಯದಲ್ಲಿ ಹೆಚ್ಚಿಸಬೇಕೆಂದು ಉದ್ದೇಶಿಸಲಾಗಿದೆ, ಸಮಾಜಾಭಿವೃದ್ಧಿ ಕಾರ್ಯಗಳನ್ನು ತಾಲೂಕು ಬೋರ್ಡುಗಳ ಕೈಗೊಪ್ಪಿಸಲಾಗಿದೆ, ಇತ್ತೀಚಿಗೆ ಭೂರಹಿತರಿಗೆ ೪ ಲಕ್ಷ ಎಕ್ರೆ ಹಂಚಲಾಗಿದೆ ಎಂದು ಅವರು ತಿಳಿಸಿದರು. ನೀರಾವರಿ ಸೌಕರ್ಯ, ಕಬ್ಬಿಣದ ಅದುರುಗಳ ಶೋಧನೆಯ ವಿಷಯಗಳಲ್ಲಿ ಆಗಲೆ ನಡೆದು ನಿರೀಕ್ಷಿಸಬಹುದಾದದ್ದು ಏನೆಂದು ಅವರು ಶ್ರುತಪಡಿಸಿ ಮಂಗಳೂರನ್ನು ಸರ್ವಋತು ಬಂದರವಾಗಿ ವೃದ್ಧಿಪಡಿಸುವ ಭಾರತ ಸರಕಾರದ ಸಂಕಲ್ಪಕ್ಕಾಗಿ ಸಂತೋಷ ವ್ಯಕ್ತಗೊಳಿಸುವುದರೊಡನೆ ಮಂಗಳೂರು ಹಾಸನ ರೈಲ್ವೆ ಮಾರ್ಗ ನಿರ್ಮಾಣವೂ ಬೇಗನೇ ಆಗಲೆಂದೂ ಹಾರೈಸಿದರು. ಒಟ್ಟು ರಾಜ್ಯದ ಮುಖ್ಯವಾದ ಎಲ್ಲ ವಿಭಾಗಗಳಲ್ಲಿ ನಡೆದ ನಡೆಯುತ್ತಿರುವ ಮತ್ತು ನಡೆಯಲಿರುವ ಕಾರ್ಯಭಾಗಗಳ ಪರಿಚಯವನ್ನು ಗವರ್ನರರು ಮಾಡಿಸಿ ಕೊಟ್ಟರು.

ಗವರ್ನರರ ಭಾಷಣವನ್ನು ಆಳುವ ಪಾರ್ಟಿ ಶಾಸಕರು ಕೊನೆಗಾದರೂ ಮನ್ನಿಸತಕ್ಕುದೇ ಆಗಿದೆ. ಆದರೆ ಇತರ ಪಾರ್ಟಿ ಸದಸ್ಯರು ಗವರ್ನರರ ಭಾಷಣಕ್ಕೆ ಆದಿಯಲ್ಲೇ ಬಹಿಷ್ಕಾರ ಹಾಕಿಯಾರೆಂಬುದು ನಿರೀಕ್ಷೆಗೆ ವಿಾರದ ವಿಷಯವಾಗಿತ್ತು. ಆದರೆ ಅದೂ ನಡೆದೇ ಹೋಯಿತು. ಗವರ್ನರರು ಸಭೆಯಲ್ಲಿ ಆಸನ ಸ್ವೀಕರಿಸಿದ ಕೂಡಲೇ ಪ್ರತಿಪಕ್ಷದ ೫೦ ಮಂದಿಗೂ ವಿಕ್ಕಿದ ಸದಸ್ಯರು ಸಭೆ ಬಿಟ್ಟು ಹೊರಟರು. ಗವರ್ನರರ ಕಡೆಗೆ ವೈಯಕ್ತಿಕ ಅಗೌರವವನ್ನು ತೋರಿಸುವುದು ತಮ್ಮ ಉದ್ದೇಶವಲ್ಲ ಎಂದು ಸಭಾ ತ್ಯಾಗಿಗಳ ಪರ ಅನ್ನಲಾಗಿದೆ. ಈ ಸಭಾತ್ಯಾಗ ಮತ್ತು ಬಹಿಷ್ಕಾರಕ್ಕೆ ಕಾರಣ ಬೇರೆ ಎನ್ನಲಾಗಿದೆ. ಮಂತ್ರಿಮಂಡಲಕ್ಕೆ ಹೆಚ್ಚಿಗೆಯಾಗಿ ೪ ಮಂದಿ ಸಚಿವರನ್ನು ಸೇರಿಸಿಕೊಂಡ ಆ ನಿರ್ಧಾರಕ್ಕೆ ವಿರುದ್ಧ ಪ್ರತಿಭಟಿಸುವ ಉದ್ದೇಶಕ್ಕಾಗಿಯೇ ಈ ಬಹಿಷ್ಕಾರವೆಂದು ಅವರ ಪರ ಪ್ರಕಟಿಸಲಾಗಿದೆ.

ಮೈಸೂರು ಮಂತ್ರಿಮಂಡಲದ ವಿಸ್ತರಣೆಯ ಮಾತನ್ನು ನಾವು ಅಂದಿನಿಂದಲೂ ಕೇಳುತ್ತಿದ್ದೇವೆ. ಮೈಸೂರು ಕಾಂಗ್ರೆಸಿನ ಅತೃಪ್ತರ ತೃಪ್ತಿ ಮತ್ತು ಪಾರ್ಟಿ ಒಗ್ಗಟ್ಟಿಗಾಗಿ ಈಗ ಆ ಮಂಡಲವನ್ನು ವಿಸ್ತರಿಸಿದ್ದಾಗಿದೆ. ಈ ವಿಸ್ತರಣೆಯ ವ್ಯವಸ್ಥೆಯನ್ನು ಪಾರ್ಟಿ ಹೊರಗಿನವರು [illegible] ಎಂಬುದೇನೋ ಪ್ರತಿಭಟನೆಯ ಸ್ವರೂಪ ಈ ರೀತಿಯಾಗಬೇಕಿರಲಿಲ್ಲ. ಸಭಾತ್ಯಾಗಿಗಳ ಪರ ಏನೇ ಹೇಳಿದರೂ ಗವರ್ನರರ ಮೇಲೆ ಅಗೌರವದ ಛಾಯೆ ಬಿದ್ದಿರಲಿಲ್ಲವೇ ಬಿದ್ದಿದೆಯೇ ಎಂಬುದು ಚರ್ಚಾಸ್ಪದ ವಿಷಯವೆನ್ನಬೇಕು. ಅಷ್ಟೇ ಅಲ್ಲ; ಈ ಪ್ರತಿಭಟನೆಯಿಂದ ಬಹಿಷ್ಕಾರದಿಂದ ನಡೆಯುವ ಸಭಾಕಾರ್ಯಗಳಿಗೇನೂ ತೊಡಕಿಲ್ಲ ಎಂಬುದಿಲ್ಲಿ ಗಮನಾರ್ಹ. ಒತ್ತಟ್ಟಿನಲ್ಲಿ ಸಭಾತ್ಯಾಗಿಗಳ ಈ ಕಾರ್ಯಭಾಗ 'ಪ್ರತಿಭಟನೆ'ಯ ಪ್ರತಿಧ್ವನಿ ಎನ್ನುವುದಕ್ಕೂ ಹೆಚ್ಚಾಗಿ ಮುಂದಿನ "ಇಲೆಕ್ಷನ್ ಸ್ಟಂಟ್" ಅಥವ ಮಹಾ ಚುನಾವಣೆಯ ತಂತ್ರಜಾಲನೆ ಎಂದು ಜನ ತಿಳಿಯದಿದ್ದರೆ ಸಾಕು.

——

ಮೈಸೂರು ಮಂತ್ರಿಮಂಡಲದ ವಿಸ್ತರಣೆ

ನಾಲ್ವರು ಮಂತ್ರಿಗಳನ್ನು ಕೂಡಿಸಿಕೊಂಡಿದೆ

ಮೈಸೂರು ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿ ಮತ್ತು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ. ಎಸ್. ನಿಜಲಿಂಗಪ್ಪ ಇವರೊಳಗೆ ನಡೆದ ಮಾತುಕತೆಗಳ ಪರಿಣಾಮವಾಗಿ ಮೈಸೂರು ಮಂತ್ರಿ ಮಂಡಲಕ್ಕೆ ಇನ್ನು ನಾಲ್ವರು ಮಂತ್ರಿಗಳನ್ನು ಸೇರಿಸಿಕೊಳ್ಳಲೇಕೆಂಬ ನಿರ್ಧಾರವಾದ ಮೇರೆಗೆ ಶ್ರೀ ಕೆ. ವೀರಣ್ಣ ಗೌಡ, ಶ್ರೀ ಎಚ್. ಎಸ್. ರುದ್ರಪ್ಪ, ಶ್ರೀ ಬಿ. ವೈಕುಂಠ ಬಾಳಿಗ (ಇವರು ಮೂವರು ನಿಜಲಿಂಗಪ್ಪನವರ ಮಂತ್ರಿಮಂಡಲದ ಸಚಿವರು) ಮತ್ತು ಶ್ರೀ ವೀರೇಂದ್ರ ಪಾಟೀಲ್ (ನಿಜಲಿಂಗಪ್ಪನವರ ಮಂತ್ರಿಮಂಡಲದ ಉಪ ಸಚಿವರು) ಇವರು ಹೊಸ ಮಂತ್ರಿಗಳಾಗಿ ಬೆಂಗಳೂರು ಕಚೇರಿಯಲ್ಲಿ ಗವರ್ನರ್ ಶ್ರೀ ಜಯಚಾಮರಾಜ ವೊಡೆಯರ್ ಅವರ ಸಮ್ಮುಖದಲ್ಲಿ ನಿನ್ನೆ ಬೆಳಿಗ್ಗೆ ಪ್ರಮಾಣ ವಚನ ಸ್ವೀಕರಿಸಿದರು.

ಪ್ರದೇಶ ಕಾಂಗ್ರೆಸ್ ಚುನಾವಣಾ ಸಮಿತಿ

ಮೇಲ್ಕಂಡ ಸಮಿತಿಗೆ ೯ ಮಂದಿ ಸದಸ್ಯರನ್ನು ಆರಿಸಲಾಗಿದೆ. ಅವರಲ್ಲಿ ಈ ಜಿಲ್ಲೆಯ ಶ್ರೀ ಎ. ಶಂಕರ ಆಳ್ವರು ಒಬ್ಬರು.

——

ಮಂಗಳೂರು

ಮಂಗಳೂರು ಸಿಟಿ ಕಾಂಗ್ರೆಸ್ ಕನ್ವೆನ್‌ಶನ್

ಮೇಲ್ಕಂಡ ಕನ್ವೆನ್‌ಶನ್ ಕಳೆದ ಆದಿತ್ಯವಾರ ಇಲ್ಲಿಯ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನ ಸಭಾಭವನದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಕೆ. ವಿಶ್ವನಾಥ ಕಾಮತ್, ಸ್ವಾ॥ ಸಮಿತಿ ಅಧ್ಯಕ್ಷ ಸ್ವಾಗತಿಸಿ ಶ್ರೀ ಬಾಳಿಗರು ಸಚಿವರಾದುದಕ್ಕಾಗಿ ಅವರನ್ನು ಅಭಿನಂದಿಸಿದರು. ಶ್ರೀ. ಎಂ. ಮಾಧವ ರಾವ್, ವಕೀಲ್, [illegible] ಉದ್ಘಾಟನಾ ಕಾರ್ಯ ನೆರವೇರಿದ ಬಳಿಕ ಶ್ರೀ ಬಿ. ವೈಕುಂಠ ಬಾಳಿಗ ಶ್ರೀ. ಗಜಾನನ ನಾ[illegible] ಪಂಡಿತ್ (ಇಬ್ಬರೂ ಎಂ. ಎಲ್. ಏ. ಗಳು) ಈ ಕೆಲವು ವರ್ಷಗಳಲ್ಲಿ ತಮ್ಮ ಮತದಾರ ಕ್ಷೇತ್ರಗಳಲ್ಲಿ ನಡೆದ ಜನಸೌಕರ್ಯದ ಕಾರ್ಯಗಳ ಕುರಿತೂ ಶ್ರೀ. ಎಂ. ಶ್ರೀನಿವಾಸ ನ್ಯಾಕ್, (ಮುು॥ ಜೆಯರ್ ಮ್ಯಾನ್) ಈ ಮುನ್ಸಿಪಾಲಿಟಿಯಲ್ಲಾದ ಪ್ರಜಾಹಿತ ಕೆಲಸಗಳ ಕುರಿತೂ ವಿವರಿಸಿದರು. ಅಧ್ಯಕ್ಷರು ಕಾಂಗ್ರೆಸ್ ಸಂಸ್ಥೆಯ ಶಕ್ತಿವರ್ಧನೆ ಪಾರಿಶುದ್ಧತೆಗೆ ಸಂಬಂಧಿಸಿದ ಹಲವು ಯುಕ್ತ ಸಲಹೆ ನೀಡಿದ ಬಳಿಕ ಜಿಲ್ಲಾ ವೃದ್ಧಿ ಸಾಧಕವಾದ ಕೆಲವು ಠರಾವೂ ಮಂಜೂರಾದುವು.

——

ಚುನಾವಣೆಗಾಗಿ ಸಂಧಾನ ಪೀಠಿಕೆ

ಉಭಯ ಸಾಮಾನ್ಯವಾದ ಬಂದು ಕಾರ್ಯಕ್ರಮದಂತೆ ಒಂದರೊಡನೆ ಒಂದು ಜತೆಗೂಡಬೇಕೆನ್ನುವ ಈ ವಿಚಾರ ಸರಣಿಯ ಪೀಠಿಕೆಯಾಗಿ ಕಮ್ಯುನಿಸ್ಟ್ ಮತ್ತು ಪ್ರಜಾ ಸೋಶಿಯಲಿಸ್ಟರ ಹೊರತಾದ ಯಾವತ್ತು ಎಡಪಕ್ಷದ ಪಾರ್ಟಿಗಳೂ ಮುಂದಿನ ಮಹಾ ಚುನಾವಣೆಯಲ್ಲಿ ಒಂದಾಗಿ ಸ್ಪರ್ಧಿಸುವ ಒಂದು ಚುನಾವಣೆ ಫ್ರಂಟ್‌ನ್ನು ಮಾಡಿಕೊಳ್ಳಲು ನಿರ್ಧರಿಸಿವೆಯಾಗಿ ಪ್ರಕಟವಾಗಿದೆ. ಆ ಪಾರ್ಟಿಗಳು ಇವು:—ಕ್ರಾಂತಿಕಾರಿ ಸೋಶಿಯಲಿಸ್ಟ್ ಪಾರ್ಟಿ, ಫಾರ್ವರ್ಡ್ ಬ್ಲಾಕ್, ಆರ್. ಸಿ. ಪಿ. ಐ., ಮಹಾ ಗುಜರಾತ್ ಪರಿಷತ್ತು, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದ 'ವರ್ಕರ್ಸ್ ಮತ್ತು ಕೃಷಿಕರ ಪಾರ್ಟಿ' ಮತ್ತು ಇಂಡಿಯನ್ ನೇಶನಲ್ ಡೆಮೊಕ್ರೆಟಿಕ್ ಕಾಂಗ್ರೆಸ್.

ಶ್ರೀ ಸಿ. ಬಿ. ಗುಪ್ತರ ವಿರುದ್ಧ

ಉತ್ತರ ಪ್ರದೇಶದ ಮುಖ್ಯ ಮಂತ್ರಿ ಶ್ರೀ ಸಿ. ಬಿ. ಗುಪ್ತರ ಸರಕಾರದ ವಿರುದ್ಧ ಪ್ರತಿಪಕ್ಷದವರು ಅಲ್ಲಿನ ಎಸೆಂಬ್ಲಿಯಲ್ಲಿ ಮಂಡಿಸಿದ್ದ ಅವಿಶ್ವಾಸದ ಠರಾವಿನ ಕುರಿತು ಎರಡು ದಿನ ಚರ್ಚೆ ನಡೆದರೂ ಠರಾವು ವ್ಯರ್ಥವಾಯಿತು. ಭಿನ್ನಾಭಿಪ್ರಾಯವಿದ್ದ ಆಳುವ ಪಾರ್ಟಿ ಸದಸ್ಯರು ತಮಗೆ ಅನುಕೂಲವಾಗಿರಬಹುದೆಂಬ ಪ್ರತಿಪಕ್ಷದವರ ಆಶೆ ನಿರಾಶೆಯಾಗಿ ಶ್ರೀ ಗುಪ್ತರ ಸ್ಥಾನ ಇನ್ನಷ್ಟು ಬಲಗೊಂಡಂತೆ ತೋರುತ್ತಿದೆ.

ಒರಿಸದಲ್ಲಿ ರಾಷ್ಟ್ರಾಧ್ಯಕ್ಷರ ಆಳಿಕೆ

ಒರಿಸ್ಸದಲ್ಲಿನ ೨೧ ತಿಂಗಳಾಯುಷ್ಯದ ಕಾಂಗ್ರೆಸ್ — ಗಣತಂತ್ರ ಪರಿಷತ್ತಿನ ಮಿಶ್ರಮಂಡಲದ ಆಳಿಕೆ ಡಾ. ಹರೇಕೃಷ್ಣ ಮೆಹತಾಬರ ೧೧ ಮಂದಿ ಸಚಿವ ಮಂಡಲದ ರಾಜೀನಾಮೆಯಿಂದ ಅಂತ್ಯಗೊಂಡು ರಾಷ್ಟ್ರಾಧ್ಯಕ್ಷರು ಅಲ್ಲಿನ ರಾಜಭಾರ ಕಾರ್ಯವನ್ನು ವಹಿಸಿಕೊಂಡಿದ್ದಾರೆ. ಶಾಸನ ರಚನೆಯ ಅಧಿಕಾರ ಪಾರ್ಲಿಮೆಂಟಿಗೆ ಸೇರಿದೆ.

(೨ನೇ ಪುಟದಿಂದ)

ಎತ್ತರದ ಮಟ್ಟಕ್ಕೆ [illegible]ಯುತ್ತಾನೆ. ಅಲ್ಲಿ ಅದಕ್ಕೆ ಅವಕಾ[illegible]ದ್ರೆ. ನಾಟಕದ ಗುರಿಯೆ

'ಅದು ವಿಷ[illegible] ಕೇವಲ ಶೃಂಗಾರ ದ್ವೀಪಕ ರಚನೆ, ಸಮಾಜವನ್ನು ಎತ್ತರಕ್ಕೆ ತರುವುದಿಲ್ಲ. ಬದಲಾಗಿ ಕೆಳಕ್ಕೆ ತಳ್ಳುತ್ತದೆ. ಆದ್ದರಿಂದ 'ಜನ ಬಯಸಿದ್ದನ್ನೆಲ್ಲಾ ನಾವು ನಾಟಕದಲ್ಲಿ ಪ್ರಚೋದಿಸುತ್ತೇವೆ, ಹರುಷಗೊಳಿಸುತ್ತೇವೆ' ಎಂದು ಹೋದರೆ ಪ್ರಮಾದವಾದೀತು. ಸಮಾಜ ಅಧಃಪತನಕ್ಕೆ ಬಂದೀತು.

'ನಾವು ರಚಿಸುವಾಗ, ಸಮಾಜದ ಸುಂದರ ಉತ್ತಮ ಉಜ್ವಲ ಭವಿಷ್ಯವನ್ನು ತಿಳಿದುಕೊಂಡು, ಅದನ್ನೇ ಅದರಲ್ಲಿ ನಿರ್ಮಿಸಿಕೊಂಡು ಹೋಗಬೇಕಾಗುತ್ತದೆ. ಅದು ಸಾಹಿತ್ಯ. ಅಂತಹದು ಸಾಹಿತ್ಯ'

ಎಂದು ಒಮ್ಮೆಗೇ ಅವರ ರಚನಾ ಶಕ್ತಿಗೆ ಒಲಿದ ಮುಗಳಿಯವರು ಹಾರ್ದಿಕವಾಗಿ ಉದ್ರೇಕಗೊಂಡು ಬಹಳವಾಗಿ ಹೇಳಿಬಿಟ್ಟರು. ರಚಯಿತರು ಒಪ್ಪಿ 'ತಿಳಿಸಿ ಪ್ರತಿಜ್ಞೆ ಮಾಡುತ್ತೇನೆ' ಎಂದು ಅವಾಪಾದ ಮುಟ್ಟಿ[illegible]ರಿಸಿ ಬಿಟ್ಟರು.

ಮದ್ರಾಸ ರಾಜ್ಯದ ಹೆಸರು ಬದಲಾಯಿತು

ಸರಕಾರಿ ದಾಖಲೆಗಳಲ್ಲಿ ತಮಿಳಿಗೆ ಸಮಾನವೆಂದು ಎಲ್ಲೆಲ್ಲಿ ಮದ್ರಾಸ್ ರಾಜ್ಯದ ಹೆಸರಿಗಾಗಿ ಇದೆಯೋ ಅಲ್ಲೆಲ್ಲ ಇನ್ನು ಮುಂದೆ 'ಚೆನ್ನೈ ರಾಜ್ಯಂ' ಎಂಬುದರ ಬದಲು 'ತಮಿಳು ನಾಡು' ಎಂದು ಬಳಸಬೇಕಾಗಿ ಅಲ್ಲಿನ ಸರಕಾರ ಮಾಡಿರುವ ತೀರ್ಮಾನವನ್ನು ಅಲ್ಲಿನ ಎಸೆಂಬ್ಲಿಯಲ್ಲಿ ಮದ್ರಾಸಿನ ಅರ್ಥ ಸಚಿವ ಶ್ರೀ ಸಿ. ಸುಬ್ರಹ್ಮಣ್ಯಂ ಪ್ರಕಟಿಸಿದ್ದಾರೆ. ಆದರೆ ಇಂಗ್ಲಿಷಿನ ಮದ್ರಾಸ್ ರಾಜ್ಯವೆಂಬ ಹೆಸರು ಬದಲಿಸುವ ಅವಶ್ಯಕತೆ ಇಲ್ಲ ವೆಂದೂ ಅವರು ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸಚಿವರುಗಳಲ್ಲಿ ಭಿನ್ನಾಭಿಪ್ರಾಯ

ಲೋಕ ಸಭೆಯಲ್ಲಿ ಕೇಂದ್ರ ಸಚಿವ ಶ್ರೀ. ಕೆ. ಸಿ. ಡೇ ಪ್ರತ್ತು ಅಸೈ ಮಂಡಲದ ಸಚಿವ ಡಾ. ಪಂಜಾಬರಾವ್ ದೇಶಮುಖ ಇವರೊಳಗಿನ ಭಿನ್ನಾಭಿಪ್ರಾಯ ಬಹಿರಂಗಕ್ಕೆ ಬಂದು ಸದಸ್ಯರ ಆಸ್ತವ್ಯಸ್ತತೆಗೆ ಕಾರಣವಾಯಿತೆಂದು ತಿಳಿದು ಬಂದಿದೆ.

ಕುಂದಾಪುರ

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 106/1961.

O. P. 38/58.

ನಾರಾಯಣ ಪಂಡಿತ ಸಹಾ ಅರ್ಜಿದಾರರು

ಎದ್ರಿರು ಇಲ್ಲಾ.

ಅರ್ಜಿದಾರರ ಕಡೆಯಿಂದ ಈ ಮೂಲಕ ಜಾಹೀರುಮಾಡಿಕೊಳ್ಳುವದೇನೆಂದ್ರೆ:

ಅರ್ಜಿದಾರರು

1. ನಾರಾಯಣ ಪಂಡಿತ. 2. ಜನಾರ್ದನ ಪಂಡಿತ. 3. ಸುಲೋಚನ ಯಾನೆ ಜಯಲಕ್ಷ್ಮಿ 4. ಮೋಹ (ಮೈನರ್), — ಕೃಷ್ಣ ಕಮ್ತಿರ ಮೊಮ್ಮಕ್ಕಳು 4ನೇಯವನ ಕ್ಷೇಪುಚಿಂತಕಳು [illegible] ಕಿಣಿ.

5. ರುಕ್ಮಿಣಿ — [illegible] ವಿಧವೆ.

[illegible]ರ ಗ್ರಾಮದ [illegible].

ಮೇಲ್ಕಂಡ O. P. [illegible]8 ಅರ್ಜಿಯಲ್ಲಿ ಅರ್ಜಿದಾರರ ಹೆಸರಿಗೆ ಕೊಡೋಣಾದ ಸಕ್ಸಶನ್ ಸರ್ಟಿಫಿಕೇಟಿನಲ್ಲಿ 3ನೇ ಅರ್ಜಿದಾರಳಿಗೆ ಕೊಡಿಸಿದ 3 (b) ಕಲಮ್ಮಿನಲ್ಲಿ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್ ಹೆಬ್ರಿ ಬ್ರಾಂಚಿನ S. B. ನಂಬ್ರ 726ನೇ ಎಕೌಂಟಿನಲ್ಲಿರುವ ರೂ. 200-0-0 ಎಂತ ಕಾಣಿಸಿದ್ದನ್ನು ರೂ. 450-0-0 ಎಂತ ಕಾಣಿಸಿ ದುರಸ್ತಿ ಪಡಿಸಿ ಕೊಡಿಸಬೇಕೆಂತ ಅರ್ಜಿದಾರರು ದಾಕ್ಲು ಮಾಡಿದ ಎಕ್ಸ್‌ಟೆನ್‌ಶನ್ ಅರ್ಜಿಯು ತಾ. 15—3—'61ಕ್ಕೆ ತನ್ನಿಗೆ ಇಡೋಣಾಗಿರುತ್ತದೆ. ಆ ಕುರಿತು ಯಾರಾದರೂ ಆಕ್ಷೇಪ ಹೇಳುವವರಿದ್ದರೆ ಸದ್ರಿ ದಿವಸ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ವಕೀಲರ ದ್ವಾರ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಗೈರು ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗತಿ ಅರ್ಜಿದಾರರ ಕಡೆಯಿಂದ ಈ ಮೂಲಕ ತಿಳಿಯಪಡಿಸಿದೆ.

M. Anthaya Shetty,
Advocate for Petitioner.

ಶಿಕ್ಕಾಂ ಕುಂದಾಪು
ತಾ. 20—2—61.

ಗುಂಡನ ಗಜೇಟು

(ಒನೇ ಪುಟದಿಂದ)

ಸ್ವರ್ಗ ಬೇರಲು ಒಂದು ಏಣಿ ತಯಾರಾಗಿದ್ದರೆ ಈ ಪುಣ್ಯವನ್ನು ಸಂಪಾದಿಸುವ ಅಥವ ಕೊಂಡುಕೊಳ್ಳುವ ಗೊಡವೆಯೇ ಇಲ್ಲದೆ ಕಳ್ಳ ಸಂತೆಯವರು ಲಾಭಖೋರರು ಲಂಚಕ್ಕೆ ಕೈಯೊಡ್ಡಿದವರು ಸುಳ್ಳು ಲೆಕ್ಕ ತಯಾರಿಸಿದವರು ಇತರರ ತಲೆ ಹೊಡೆದು ದುಡ್ಡು ಮಾಡಿದವರೇ ಮೊದಲಾದವರೂ ಈ ಏಣಿ ಸ್ವರ್ಗಸ್ಥರಾಗವಾಗಿ ಸಾಗಿ ಸ್ವರ್ಗಕ್ಕೂ ನುಗ್ಗಿ [illegible]. ಅದರೆ ಅಂಥದೊಂದು ಏಣಿ ಇಲ್ಲದೆ ಮೋಸವಾಯಿತು. ಅಂತಲೇ ಚಿಕ್ಕದೊಂದು ಏಣಿ ಏರಿ ಕೂತನೊಬ್ಬ ಕೇರಳ ರಾಜ್ಯದಲ್ಲಿ. ಅವನ ಏಣಿ ಎಂದರೆ ಒಂದು ತೆಂಗಿನ ಮರ; ಅದರ ತುದಿ. ಕೃಷ್ಣವಾಹನ ಗರುಡನಿತ್ತ ಬಂದು ತಾನಾ ಗರುಡನನ್ನೇರಿ ಸ್ವರ್ಗಕ್ಕೇರುವೆನೆಂಬ ಯೋಚನೆ ಅವನಿಗಿದ್ದಿಲ್ಲ. ಯಾವುದೋ ಒಂದು ಮೋಡ ತಾನು ಕೂತಲ್ಲಿಗೆ ಬಂದು ತನ್ನನ್ನು ಸ್ವರ್ಗಕ್ಕೆ ಸಾಗಿಸುವುದೆಂದೇ ಅವನ ವಿಶ್ವಾಸ. ಅವನೇನು ಪುಣ್ಯ ಮಾಡಿದ್ದನೋ ಇಲ್ಲವೋ ಪುಣ್ಯವಿಲ್ಲದೇನೇ ಹೋಗಬಹುದಾದ ಒಂದು ಸ್ವರ್ಗವಿದ್ದರೆ ಆ ಸ್ವರ್ಗಕ್ಕೆ ಏರಬಹುದೆಂದಾತ ನಂಬಿದ್ದನೋ ಹ್ಯಾಗೋ ಅಂತೂ "ವಿಶ್ವಾಸ ಫಲದಾಯಕ" ಎಂದೇ ಆತ ಆ ಮರದ ತುದಿಗೇರಿ ಬಹಳ ಹೊತ್ತು ಅಲ್ಲೆ ಕೂತಿದ್ದ. ಆದರೆ ಆ ವಿಶ್ವಾಸ ಫಲ ಕೊಡಲಿಲ್ಲ. ಮೋಡ ಬರಲಿಲ್ಲ. ಕೊನೆಗೆ ಬಂದದ್ದೆಂದರೆ ಪೋಲೀಸರು. ಅವರಾದರೂ ಅವನನ್ನು ಸ್ವರ್ಗಕ್ಕೇರಿಸದೆ ಆ ಮರದಿಂದ ಕೆಳಗೇ ಇಳಿಸಿ ಬಿಟ್ಟರು. ಒಟ್ಟು ಮೇಲೇರುವ ಬದಲು ಕೆಳಗಿಳಿಯುವ ಪುಣ್ಯ ಅವನದಾಯಿತು.

ಮಡಿ ಮೈಲಿಗೆ ವ್ರತೋಪವಾಸ ಇತ್ಯಾದಿಗಳನ್ನು ಕೇವಲ ಡಂಭಾಚಾರಕ್ಕಾಗಿ ಮಾಡುತಿದ್ದ ನನ್ನ (ಗುಂಡನ) ಅಜ್ಜಿ, ತಿಲಾಂಶ ಭಕ್ತಿ ವಿಶ್ವಾಸವೂ ಒಳಗಿಲ್ಲದೆ ತೀರ್ಥಯಾತ್ರೆ [illegible]ದ್ದೇವೆ ಎಂದು ಹೊರಗೆ ಇತರರ ಕಣ್ಣಿಗೆ ಮಣ್ಣೆರಚಲು ಹೇ[illegible]ಳುತ್ತಿರುವ ಇತರರು ಸ್ವರ್ಗಕ್ಕೆ ಹೋದರೋ ನರಕಕ್ಕೆ ಬಿದ್ದರೋ ಗೊತ್ತಿಲ್ಲ. ಅಂತೇ ಸ್ವರ್ಗದೊಳಗೆ ಪ್ರವೇಶಿಸುವ ಬದಲು ಪೋಲೀಸರ ಜೈಲಿನೊಳಗೆ ಹೊಕ್ಕ ಕೇರಳದ ಪುಣ್ಯಾತ್ಮನೂ ಮುಂದೆ ಹೋಗುವುದು ಸ್ವರ್ಗಕ್ಕೋ ನರಕಕ್ಕೋ ಹೇಳಲಾಗದು. "ಇಂಥವರೆಲ್ಲರದೂ ಮೂಢಭಕ್ತಿಯ ಆಚಾರದ ಆಡಂಬರ" ಮಾತ್ರ; ನಾಗರಿಕತನದ ಈಗಿನ ಕಾಲದಲ್ಲಿ ಮೂಢಭಕ್ತಿಗೆ ಬಹಿಷ್ಕಾರವೇ ಇದೆ. ಸ್ವರ್ಗವೆಂಬುದೊಂದು ಇದ್ದರೆ ಆ ಸ್ವರ್ಗ ಸುಖವನ್ನು ಈಗಲೇ ಇಲ್ಲೇ ಅನುಭವಿಸಬಹುದೆಂದು 'ದುಡ್ಡೇ ದೇವರೆನ್ನುವವರು' ಹೇಳುತ್ತಿದ್ದಾರೆ. ಆ ದೇವರನ್ನು ಒಲಿಸಿಕೊಳ್ಳುವ ಮಾರ್ಗ ನ್ಯಾಯದ್ದೋ ಅನ್ಯಾಯದ್ದೋ ಎಂದು ಯೋಚಿಸಬೇಕಾಗಿಲ್ಲ ವಂತೆ. ತನ್ನ ಪಾಲಿಗೆ 'ಹೊಟ್ಟೆ ತುಂಬ ಅನ್ನ ಮೈ ತುಂಬ ಬಟ್ಟೆ' ಇಷ್ಟೇ ಇದ್ದರೆ ಅದೇ ಸ್ವರ್ಗವೆಂದು ಗುಂಡ ಹೇಳುತ್ತಾನೆ. ನೀವೆನೆನ್ನುತ್ತೀರಿ?

———

ಕರಾಚಿಯಲ್ಲಿ ಹಿಂಸಾತ್ಮಕ ಮತ ಪ್ರದರ್ಶನ

ಕರಾಚಿಯಲ್ಲಿ ಈಚೆಗೆ ಭಾರತದ ಹೈ ಕಮಿಶ್ನರರ ವಿರುದ್ಧ ನಡೆಸಿದ ಹಿಂಸಾತ್ಮಕ ಮತ ಪ್ರದರ್ಶನ ಉದ್ದೇಶಪೂರ್ವಕವಾಗಿ ಮುಂದಾಗಿ ಯೋಚಿಸಿಯೇ ನಡೆಸಿದ್ದಾಗಿದೆ ಎಂದೂ, ಈ ಮತ ಪ್ರದರ್ಶನ ನಡೆಯುವುದಕ್ಕೆ ಎಷ್ಟೋ ಹೊತ್ತಿಗೇ ಮೊದಲೇ ಅಲ್ಲಿ ಪೋಲೀಸರಿದ್ದರೂ ಕೊನೆತನಕವೂ ಅವರು ನಡುವೆ ಪ್ರವೇಶಿಸದಿಹೋದರಿಂದೂ ಭಾರತ ಪ್ರಧಾನ ನೆಹರು ಹೇಳಿದ್ದಾಗಲ್ಲದೆ ಈ ಮತ ಪ್ರದರ್ಶನವೂ ಪಾಕಿಸ್ತಾನದ ಪತ್ರಿಕೆಗಳು ಭಾರತದ ವಿರುದ್ಧವಾಗಿ ಮಾಡುತ್ತಿರುವ ಜೋರಾವರಿಯ ಅಪಪ್ರಚಾರವೂ ಅಸಂತೋಷವನ್ನೂ ಕೋಪವನ್ನೂ ಉಂಟು ಮಾಡುವಂಥದೆಂದೂ ಅವರು ಅಭಿಪ್ರಾಯ ಸೂಚಿಸಿದ್ದಾರೆ.

೧೦ ಸಾವಿರ ವಿದ್ಯಾರ್ಥಿಗಳ ಕಾದಾಟ

ಕಾಂಗೋ ಪ್ರಧಾನ ಪೆಟ್ರಿಕ್ ಲುಮುಂಬಾರ ಕೊಲೆ ಅಲ್ಜೀರಿಯದಲ್ಲಿನ ಫ್ರೆಂಚರ ಅನಾಹುತ ಮತ್ತು ಇಜಬಲ್ಲರದ ದಂಗೆ ಇವುಗಳ ಖಂಡನೆಗಾಗಿ ಕರಾಚಿಯಲ್ಲಿನ ವಿದ್ಯಾರ್ಥಿಗಳು ನಾನಾ ಘೋಷಣೆ ಮಾಡುತ್ತ ಅಲ್ಲಿ ಜಾರಿಯಲ್ಲಿದ್ದ ಸಭೆ ಮೆರವಣಿಗೆಗಳ ಮೇಲಿನ ಬಹಿಷ್ಕಾರಾಜ್ಞೆಯನ್ನು ಉಲ್ಲಂಘಿಸಿದಾಗ ಸುಮಾರು ೧೦,೦೦೦ ಮಂದಿ ವಿದ್ಯಾರ್ಥಿಗಳಿಗೂ ಪೋಲೀಸರಿಗೂ ಕೈ ಕೈ ಹತ್ತಿ ಲಾಠೀ ಚಾರ್ಜೂ ಕಣ್ಣೀರು ಹಬೆಯ ಪ್ರಯೋಗವೂ ಆಗಬೇಕಾದ ಪ್ರಮೇಯ ಉಂಟಾದ ಪರಿಣಾಮವಾಗಿ ೨೫ ಮಂದಿ ವಿದ್ಯಾರ್ಥಿಗಳಿಗೆ ಗಾಯಗಳಾದಂತೆ ವರದಿ. ಸದ್ಯ ಪೋಲೀಸ್ ಅಧಿಕಾರಿಗಳು ೧ ವಾರದ ವರೆಗೆ ಆ ನಗರದ ಎಲ್ಲ ಕಾಲೇಜು ಮತ್ತು ಶಾಲೆಗಳನ್ನು ಮುಚ್ಚಿದ್ದಾರೆ.

ಕೇಂದ್ರದ ಹಂಗಾಮಿ ಗೃಹ ಸಚಿವರು

ಕೇಂದ್ರದ ಗೃಹ ಮಂತ್ರಿ ಪಂಡಿತ ಪಂತರು ಗುಣ ಹೊಂದುವ ವರೆಗೆ ಭಾರತ ಪ್ರಧಾನರ ಆಜ್ಞೆಯಂತೆ ಪಂಡಿತ ಪಂತರ ಗೃಹ ಶಾಖೆಯನ್ನು ಶ್ರೀ ಲಾಲ್ ಬಹದೂರ್ ಶಾಸ್ತ್ರಿ ಅವರು ನೋಡಿಕೊಳ್ಳುವರು. ಪಂಡಿತಜೀಯವರಿಗೆ ಇನ್ನೂ ಪ್ರಜ್ಞೆ ಬಂದಿರಲಿಲ್ಲ ಎಂದು ಕಳೆದ ತಾ. ೨೭ರ ವಾರ್ತೆ.

——

1961—62ನೇ ಮುಂಗಡ ಪತ್ರ

ಮೇಲ್ಕಂಡ ಮುಂಗಡ ಪತ್ರವನ್ನು ಕೇಂದ್ರದ ಅರ್ಥ ಸಚಿವ ಶ್ರೀ ಮೊರಾರ್ಜಿ ದೇಸಾಯಿ ಅವರು ಲೋಕ ಸಭೆಯ ಮುಂದಿರಿಸಿದ್ದಾರೆ. ಈಗಿನ ತೆರಿಗೆ ಮಟ್ಟದಲ್ಲಿ ಮುಂದಿನ ವರ್ಷದ ಆದಾಯ ರೂ. ೯೬೨-೯೨ ಕೋಟಿ ಮತ್ತು ವೆಚ್ಚ ರೂ ರೂ. ೧೦೨೩.೫೨ ಕೋಟಿ. ತೆರಿಗೆಗಳಿಂದ ರೂ. ೬೦.೮೬ ಕೋಟಿ ಸಂಗ್ರಹವಾಗಬೇಕಾಗಿರುವಲ್ಲಿ ಆಡಿಕೆ ಹೊಗೆಸೊಪ್ಪು ನ್ಯೂಸ್ ಪ್ರಿಂಟ್ ಇತ್ಯಾದಿಗಳ ಮೇಲೆ ತೆ[illegible]ಹೆಚ್ಚಿಸಲಾಗಿದೆ. ೪೧ ಪದಾರ್ಥಗ[illegible]ಮೇಲೆ ಆಮದು ತೆರಿಗೆ ೧೮ ವಸ್ತುಗಳ ಮೇಲೆ ಹೊಸ ಅಬಕಾರಿ ತೆರಿಗೆ ಹೇರಿ೧೬ ಸಾಮಗ್ರಿಗಳ ಅಬಕಾರಿ ತೆರಿಗೆ ಹೆಚ್ಚಿಸಲಾಗಿದೆ ಎಂದು ಮುಂಗಡ ಪತ್ರ ನಮೂದಿಸಿದೆ.

——

ಕರ್ನಾಟಕವೆಂದು ಹೆಸರಿಸಬೇಕು

ನಗರದ ಕಾಂಗ್ರೆಸ್ ಸಮ್ಮೇಳನದಲ್ಲಿ ನಗರದ ಪ್ರಾಮುಖ್ಯ ತರಾವುಗಳ ಅಂಗೀಕಾರ

ಮಂಗಳೂರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಭಾಭವನದಲ್ಲಿ ತಾ. ೨೬ರಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಮಂಗಳೂರು ನಗರದ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನವು ರಾಜ್ಯವನ್ನು "ಕರ್ನಾಟಕ ಪ್ರಾಂತ್ಯ"ವೆಂದು ಹೆಸರಿಸಬೇಕೆಂದು ಪ್ರದೇಶ ಕಾಂಗ್ರೆಸ್ ಸಮಿತಿ ಹಾಗೂ ರಾಜ್ಯ ಸರಕಾರವನ್ನು ವಿನಂತಿಸುವ ತಂಠವೊಂದನ್ನು ಅಂಗೀಕರಿಸಿತ. ಅಲ್ಲದೆ ಕಾಸರಗೋಡು ತಾಲೂಕಿನ ಚಂದ್ರಗಿರಿ ಹೊಳೆಯಿಂದ ಉತ್ತರ ಭಾಗವಾದ ಕಾಸರಗೋಡು, ಕುಂಬ್ಳಾ ಮತ್ತು ಮಂಜೇಶ್ವರ ಸಿರ್ಕಾರಗಳನ್ನು ಕೆರ್ನಾಟಕಕ್ಕೆ ಸೇರಿಸಿ ಆ ಭಾಗದ ಕನ್ನಡಿಗರಿಗಾದ ಅನ್ಯಾಯವನ್ನು ಸರಿಪಡಿಸಲು ಮೈಸೂರು ಸರಕಾರವು ಕೇರಳ ಮತ್ತು ಕೇಂದ್ರ ಸರಕಾರಗಳೊಡನೆ ಪತ್ರ ವ್ಯವಹಾರ ನಡೆಸುವಂತೆ ಕೇಳಿಕೊಳ್ಳಬೇಕೆಂದೂ ತೀರ್ಮಾನಿಸಲಾಯಿತು.

ಈ ಸಮ್ಮೇಳನದಲ್ಲಿ ಮಂಗಳೂರು ಬಂದರನ್ನು ಬೃಹತ್ ಬಂದರಾಗಿ ಮಾಡುವ ಕಾರ್ಯ ಮೂರನೇ ಯೋಜನೆಯಲ್ಲಿಯೇ ಆರಂಭವಾಗಬೇಕು, ಮಂಗಳೂರು ಹಾಸನ ರೈಲ್ವೆ ಸಂಪರ್ಕ ವೇರ್ಪಡಬೇಕು; ಅಭಿವೃದ್ಧಿ ಹೊಂದುತ್ತಿರುವ ಮಂಗಳೂರಿಗೊಂದು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟನ್ನು ಆರಂಭಿಸಬೇಕು, ಸಣ್ಣ ಮತ್ತು ಗುಡಿಕೈಗಾರಿಕೆಗಳಿಗೆ ಪ್ರೋತ್ಸಾಹ ಸಿಗಲು ಜಿಲ್ಲಾ ಮಟ್ಟದ ಕೈಗಾರಿಕಾ ಬೋರ್ಡೊಂದನ್ನು ಸ್ಥಾಪಿಸಬೇಕು, ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ವಸತಿ ಸೌಕರ್ಯ ವೇರ್ಪಡಿಸಲು ಹೌಸಿಂಗ್ ಬೋರ್ಡೊಂದನ್ನು ರಚಿಸಬೇಕು, ಸದ್ಯ ನಿಲ್ಲಿಸಲ್ಪಟ್ಟಿರುವ ಮಂಗಳೂರು - ಬೆಂಗಳೂರು - ಮದ್ರಾಸು ವಿಮಾನ ಸಂಚಾರ ಪುನರಾರಂಭವಾಗಬೇಕು, ನೌಕರರ ರಾಜ್ಯವಿಮಾ ಯೋಜನೆ ಮಂಗಳೂರಿಗೂ ಅನ್ವಯಿಸಲ್ಪಡಬೇಕು, ಮಂಗಳೂರಿಂದ ಮೈಸೂರಿಗೆ ಮಡಿಕೇರಿಗಾಗಿ ನೇರವಾದ ತಂತಿ ಮತ್ತು ಅಂಚೆ ಸಂಪರ್ಕವಾಗಬೇಕು, ಪ್ರಾಥಮಿಕ ಶಾಲೆಗಳೆಲ್ಲೆಲ್ಲಿ ಮಧ್ಯಾಹ್ನ ಉಚಿತ ಊಟದ ವ್ಯವಸ್ಥೆಯಾಗಬೇಕು, ರಾತ್ರಿ ಶಾಲೆಗಳಿಗೆ ಹೆಚ್ಚು ಪ್ರೋತ್ಸಾಹ ದೊರೆಯುವುದಲ್ಲದೆ ಹಗಲು ಶಾಲೆಗಳ ಅಧ್ಯಾಪಕರು ರಾತ್ರಿ ಶಾಲೆಗಳಲ್ಲಿ ಹೆಚ್ಚುವರಿ ವೃತ್ತಿ ನಿರ್ವಹಿಸಲು ಆಕ್ಷೇಪ ವಿರದಾರದು ಎಂದು ಮುಂತಾಗಿ ತರಾವು ಗಳಾದುವು.

——

ಸಮಾಜ ಚಿತ್ರ

ಪ್ರೇಮವೇ ಸರ್ವಸ್ವವಲ್ಲ

ಸ್ವೀ ಕಾಲ ಕಷ್ಟಪಟ್ಟು ಸಂಪಾದಿಸಿದ್ದಲ್ಲಿ ಕೆಲಸಕ್ಕೆ ರಾಜಿ ಕೊಡಬೇಕಾಗಿದ್ದರೆ ಸವಿತೆಯ ಸ್ಥಿತಿಯಲ್ಲಿದ್ದ ಒಬ್ಬ ಹುಡುಗಿಗೆ ಬಹಳ ಧೈರ್ಯವೇ ಬೇಕಾಗಿತ್ತು.

ಸವಿತೆ ಆ ನಗರದ ಒಂದು ಫರ್ಮಿನಲ್ಲಿ ಒಬ್ಬ ಕಿರಿಯ ಕ್ಲಾರ್ಕ್. ಆಕೆಗೆ ಬರುತ್ತಿದ್ದ ಅಲ್ಪ ಸ್ವಲ್ಪ ಸಂಬಳದಿಂದ ಕಾಹಿಲೆಯಲ್ಲಿದ್ದ ಆಕೆಯ ತಾಯಿಯನ್ನು ಕಾಪಾಡಿಕೊಂಡು ಬರುವುದು ಆಗಲೇ ಆಕೆಗೆ ಬಹಳ ಕಷ್ಟವಾಗಿತ್ತು. ಅಂಥ ಸಂದಿಗ್ಧ ಸಂದರ್ಭದಲ್ಲಿ ಆಕೆ ಕೆಲಸಕ್ಕೆ ರಾಜಿ ಕೊಡುವುದು ಹೊಣೆಗೆಟ್ಟ ಕಾರ್ಯವೆಂದೇ ತಿಳಿಯುವಂತಿತ್ತು.

ಆದರೆ ಸವಿತೆಗೆ ರಾಜಿ ಕೊಡದೆ ಬೇರೆ ಉಪಾಯವಿರಲಿಲ್ಲ. ಅವಳು ಹೆಂಗಸಾಗಿ ಹೆಂಗಸಿನ ದೌರ್ಬಲ್ಯವೂ ಆಕೆಯಲ್ಲಿ ಇಲ್ಲದೆ ಹೋಗಿರಲಿಲ್ಲ. ಒಬ್ಬಾತನೊಡನೆ ಕೆಲಸ ಮಾಡುತ್ತ ಆತನನ್ನು ಪ್ರೀತಿಸತೊಡಗಿದಾಗ ಅಂತಃಕರಣದ ಹೋರಾಟವನ್ನು ಅಣಗಿಸಿ ಬಿಡುವುದು ಆಕೆಯಿಂದ ಸಾಧ್ಯವಾಗದೆ ಹೋಯಿತು. ಆದರೆ ಅವನನ್ನು ಮದುವೆಯಾಗುವ ಇಷ್ಟ ಆಕೆಗಿರಲಿಲ್ಲ. ಆತನ ಕಡೆಗಿನ ತನ್ನ ಪ್ರೇಮಕ್ಕೆ ಆಹುತಿಯಾಗುವ ಅಪಾಯಕ್ಕೆ ಎದುರಾಗುವುದಕ್ಕಿಂತ ಹಣಕಾಸಿನ ಕಷ್ಟಗಳೇನಿದ್ದರೂ ಅವನ್ನು ಸಹಿಸಲು ಆಕೆ ಸಿದ್ಧಳಾಗಿಯೇ ನಿಂತಿದ್ದಳು.

ಸವಿತೆಗೆ ಜೀವನ ಅಷ್ಟೇನೂ ದಯೆದೋರಿರಲಿಲ್ಲ. ಒಂದು ವಿಮಾ ಕಂಪೆನಿಯಲ್ಲಿ ಸಹಾಯಕನಾಗಿದ್ದ ಆಕೆಯ ತಂದೆ ಆಕೆ ಇನ್ನೂ ಎಳೆಯಳಾಗಿರುವಾಗಲೇ ಹೋಗಿ ಬಿಟ್ಟ. ಸ್ವಾಮಿನಿಷ್ಠೆಯ ಸತಿ, ಪ್ರೀತಿಯ ಮಗಳನ್ನು ಬಿಟ್ಟು ಅಗಲುವಾಗ ಆತ ಹೆಂಡಿರು ಮಕ್ಕಳಿಗಾಗಿ ಮಾಡಿಟ್ಟದ್ದು ಚಿಕ್ಕಾಸೂ ಇರಲಿಲ್ಲ. ಈ ಬಡ ವಿಧವೆ ಮತ್ತಾ ಮಗಳನ್ನು ನೋಡಿಕೊಳ್ಳುವ ಭಾರವೆಲ್ಲಿ ತಮ್ಮ ಮೈ ಮೇಲೆ ಬಿದ್ದೀತೋ ಎಂದು ಹೆದರಿ ಸ್ಥಿತಿವಂತರಾಗಿದ್ದ ಸವಿತಾಪದ ಬಂಧುಗಳು ಕೂಡ ದುಃಖಿತರಾದ ಈ ಅನಾಥ ಕುಟುಂಬದ ಕಡೆಗೆ ಮತ್ತೊಮ್ಮೆ ತಿರುಗಿ ನೋಡಲೂ ಮನಸ್ಸು ಮಾಡಲಿಲ್ಲ.

ಂ ಂಂ ಂ

ನಿರಾಶೆಯ ಆ ಕಾಲದಲ್ಲಿ ಸವಿತೆಯ ತಾಯಿ ತಾನು ತೀರ ನಿಸ್ಸಹಾಯಕಳೆಂಬುದನ್ನು ಮನಗಂಡಳು. ಆಕೆಯ ಚೊಚ್ಚಲು ಮಗು ಬದುಕಿರುತ್ತಿದ್ದರೆ ಆ ಮಾತು ಬೇರೆ. ಆದರೆ ನಿರ್ದಯ ಮೃತ್ಯು ಆ ಗಂಡು ಮಗುವನ್ನು ಹಲವು ವರ್ಷಗಳ ಹಿಂದೆಯೇ ಸೆಳೆದೊಯ್ದಿತ್ತು. ಈಗ ಸವಿತೆಗೊಬ್ಬಳಿಗಾಗಿಯೇ ಆಕೆ ಬದುಕಿರಬೇಕು ಹಾಗೆ ತನ್ನ ಕಷ್ಟಕ್ಲೇಶಗಳನ್ನು ಧೈರ್ಯದಿಂದ ಇದಿರಿಸುವಂತಾಕೆ ಸರಕಲ್ಪ ಮಾಡಿಕೊಳ್ಳು. ಆರೋಗ್ಯವಿಲ್ಲದಿದ್ದರೂ ಆಕೆ ಅಲ್ಲಿನದೊಂದು 'ಸಿಲೊಲೊಯ್ಡ್' ಕಾರ್ಖಾನೆಯಲ್ಲಿ ಕೆಲಸ ಮಾಡತೊಡಗಿದಳು. ಆ ತಾಯಿಯ ಅಂತಃಕರಣವೇ ಸವಿತೆಯನ್ನು ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪಾಸಾಗುವಂತೆ ಮಾಡಿತು. ಸವಿತೆ ಗ್ರಾಜ್ಯುವೇಟರೊಡನೆ ಸ್ಪರ್ಧಿಸಬೇಕಾಗಿದ್ದ ಕಾರಣ ಆಕೆಗೊಂದು ಉದ್ಯೋಗ ದೊರಕಲು ಬಹು ಕಾಲ ಹಿಡಿಯಿತು.

ತಾಯಿಗೂ ಮಗಳಿಗೂ ಪರಿಸ್ಥಿತಿ ಕೊಂಚ ಕಾಲ ಶುಭ್ರವೆಂದು ತೋರಿತು. ಅನಂತರ ಅದೊಂದು ಅನಾಹುತವೇ ಸಂಭವಿಸಿತು. ತಾಯಿಗೆ ಪಕ್ಷವಾತ!

ಸಿತಿ ಇನ್ನಷ್ಟೂ ಕೆಡುವಂತೆ ಇದೇ ಸಮಯದಲ್ಲಿ ಸವಿತೆಗೆ ಇನ್ನೊಂದು ಇಲಾಖೆಗೆ ವರ್ಗವಾಯಿತು. ಅಲ್ಲಿ ಆಕೆ ಹರೀಶನನ್ನು ಕಂಡಳು.

ಹರೀಶನೊಬ್ಬ ಸಭ್ಯ ತರುಣ. ಅವನದು ಮನೋಹರ ವ್ಯಕ್ತಿತ್ವ; ಸಂತೋಷಗೊಳಿಸುವ ನಡೆ ನುಡಿ. ಆ ಶಾಖೆಯ ಪ್ರಧಾನ ಅಧಿಕಾರಿ ಅವನು. ಕಾರ್ಯಾಲಯದ ವ್ಯವಹಾರಗಳು ಆಕೆಯನ್ನು ಆತನ ನಿಕಟ ಸಂಪರ್ಕಕ್ಕೆ ತಂದಿಟ್ಟವು. ಹರೀಶ ಸವಿತೆಯನ್ನು ಮೆಚ್ಚಿಕೊಂಡಿದ್ದ. ಕ್ರಮಶಃ ತನ್ನನ್ನು ಮದುವೆಯಾಗುವಂತೆ ಆಕೆಯನ್ನು ಕೇಳಿದ.

ಸವಿತೆ ಬಡತನದಲ್ಲಿ ಹುಟ್ಟಿರಬಹುದು. ಆದರೆ ಜಿಂಕೆಯಂಥ ಸೊಬಗು; ಹಳ್ಳಿ ಹೆಣ್ಣು ಮಕ್ಕಳ ಸರಳ ಸ್ವಭಾವ ಲಜ್ಜಾ ಭಾವ ಆಕೆಯಲ್ಲಿ. ಸ್ವಾಮಿನಿಷ್ಠೆಯ ಸತಿಗಾಗಿ ಹುಡುಕುವ ಯಾವನೊಬ್ಬ ಯುವಕನಾದರೂ ಸವಿತೆಯಲ್ಲಿ ತನ್ನ ಜೀವನದ ಗೆಳತಿಯನ್ನು ಕಾಣಬಲ್ಲ. ಸವಿತೆಯೂ ಹರೀಶನನ್ನು ಬಹಳವಾಗಿ ಮೆಚ್ಚಿಕೊಂಡಿದ್ದಳು. ಮತ್ತೆ ಆತ ಮದುವೆ ಮಾತೆತ್ತಿದಾಗ ಆಕೆ 'ಆಗಲಿ' ಎಂದಳು.

ತಂದೆ ತಾಯಿಗಳನ್ನು ಬಹಳವಾಗಿ ಒಡಂಬಡಿಸಿದ ಬಳಿಕ ಅವರು ಮಗನು ಆರಿಸಿಟ್ಟ ಹೆಣ್ಣನ್ನು ಒಪ್ಪಿಕೊಂಡರು. ಚೆನ್ನಾದ ಯೋಗ್ಯತೆಯುಳ್ಳವನೂ ಶುಭ್ರ ಭವಿಷ್ಯವಿರುವವನೂ ಆದ ತಮ್ಮ ಮಗನಿಗೆ ಅವರು ವರದಕ್ಷಿಣೆಯ ಒಂದು ದೊಡ್ಡ ಗಂಟನ್ನೇ ಹಾರೈಸಿಕೊಂಡಿದ್ದರು.

ತಂದೆ ಕೋಪದಿಂದ "ಅವನತ್ರ ನೋಡಬಾರದೇ?' ಎಂದು ಮುಂಬರಿದರು. "ಅವನಿಗೆ ಉತ್ಕೃಷ್ಟ ಶಿಕ್ಷಣ ಕೊಡಿಸಿದೆ. ಅವನಿಗೆ ಬೇಕಾದ ಪ್ರತಿಯೊಂದನ್ನೂ ಕೊಟ್ಟೆ. ಇದಕ್ಕೆ ಪ್ರತಿಯಾಗಿ ಈಗ ಅವನು ಏನು ಮಾಡುತ್ತಿದ್ದಾನೋ ಸ್ವಲ್ಪ ನೋಡಿ. ಹಣವಿಲ್ಲದ ದರಿದ್ರ ಹೆಣ್ಣು ಸಮಾಜದ ಹಿನ್ನೆಲೆ ಇಲ್ಲದ ಹೆಣ್ಣು ಯಾವುದೊಂದೂ ಇಲ್ಲದ ಹೆಣ್ಣನ್ನು ಈ ಮನೆಗೆ ವಧುವಾಗಿ ತರಬೇಕೆನ್ನುತ್ತಾನೀತ" ಎಂದು ಸ್ವಲ್ಪ ಕಾಲ ಮೌನವಾಗಿದ್ದು—"ಆದರೆ ಹರೀಶ! ನನ್ನ ಸೊಸೆ ಮನೆಗೆ ಸಹಾಯ ಮಾಡಬೇಕು; ಆಕೆ ಆಫೀಸು ಕೆಲಸದಲ್ಲಿರಲು ಎಷ್ಟಕ್ಕೂ ಬಿಡಲಾರೆ" ಎಂದು ಕಂಡಿತವಾಗಿ ಹೇಳಿದ.

ಹರೀಶ ಸವಿತೆಯೊಡನೆ ಈ ಮದುವೆಗೆ ಹೆತ್ತವರೊಪ್ಪಿದ್ದಾರೆಂಬ ವಾರ್ತೆ ತಿಳಿಸುತ್ತ ಆಕಸ್ಮಿಕವಾಗಿ ತಂದೆ ಹಾಕಿಟ್ಟಿದ್ದ ಆ ಒಂದು ಶರ್ತದ ಕುರಿತೂ ಪ್ರಸ್ತಾವಿಸಿದಾಗ ಸವಿತೆ ಎಂಥ ಉಭಯ ಸಂಕಟದಲ್ಲಿ ಬೀಳುವಳೆಂದು ಆತ ಮುಂದಾಗಿ ಯೋಚಿಸಿರಲಿಲ್ಲ. ಆದರೆ ಸವಿತೆ ತಾನು ಹಾಸಿಗೆ ಹಿಡಿದಿರುವ ತಾಯಿಯ ಆರೈಕೆ ನೋಡಿಕೊಳ್ಳಬೇಕಾದ್ದರಿಂದ ಮದುವೆಯ ಮೇಲೆ ತನ್ನ ಕೆಲಸ ಬಿಡಲು ಸಾಧ್ಯವೆಂದು ಹರೀಶನಿಗೆ ಸ್ಪಷ್ಟವಾಗಿ ತಿಳಿದಳು. ತಾನು ಆ ಕೆಲಸದಲ್ಲಿರಬೇಕಾದ ಆವಶ್ಯಕತೆ ಏನೆಂಬುದನ್ನು ಆತನ ತಂದೆಯೊಡನೆ ಹೇಳಿಕೊಳ್ಳುವಂತೆ ಹರೀಶನೊಡನೆ ಬೇಡಿಕೊಂಡಳು. ಆದರೆ ತಂದೆಯನ್ನು ಚೆನ್ನಾಗಿ ಬಲ್ಲ ಹರೀಶ ತಂದೆಯ ಕೋಪದೆದುರಿಗೆ ಇನ್ನೊಮ್ಮೆ ಇದಿರಾಗಲು ನಿರಾಕರಿಸಿದ.

ಂ ಂಂ ಂ

"ಹಾಗಾದರೆ ನೀವು ಇನ್ನೊಂದು ಹುಡುಗಿಯನ್ನು ಇನ್ನೆಲ್ಲಿಯಾದರೂ ನೋ

ತಾಜಾವಜ್ರಗಳಿಗೆ ಖಾತ್ರಿ ವಜ್ರದಂಗಡಿ.

ಎಸ್. ಎಲ್. ಶೇಟ್

ವಜ್ರದ ವ್ಯಾಪಾರಿಗಳು, ಕಾರ್ನಾಡ್ ಸದಾಶಿವ ರಾವ್ ರೋಡ್, ಮಂಗಳೂರು.

ಚಿನ್ನದ ಯಾವತ್ತು ಆಧುನಿಕ ಫೇಶನಿನ ಆಭರಣಗಳಿಗೆ ಹೆಸರಾಂತ ಸುವರ್ಣ ಗೃಹ.

ಬೆಳ್ಳಿ, ಬಂಗಾರದ ತರವಾರು ಒಡವೆಗಳು ಯಾವಾಗಲೂ ಇಲ್ಲಿ ದೊರೆಯುತ್ತವೆ.

ಮಹಾ ಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

Proprietor: S.L. SHET.

ಠೇವಣಾತಿಗಳು.....ಆಕರ್ಷಕ ಬಡ್ಡಿ ದರಗಳು

ಜೀವನದ ವೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ ನಿಮ್ಮ ಹಣಕ್ಕೆ–ಅತ್ಯಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ– ಆತ್ಯಾಕರ್ಷಕ ದರದಲ್ಲಿ ಬಡ್ಡಿ ಕೊಟ್ಟು, ನಿಮ್ಮನ್ನು ಸಂತುಷ್ಟರಾಗಿಸುವುದಾಗಿದೆ

ಕೊ ಪ್ಪೊ ರೇ ಶ ನ್ ಬೇಂಕ್

ನಾನು ಠೇವಣಾತಿಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಇತ್ತೀಚೆಗೆ ಏರಿಸಲಾಯಿತಿದೆ. ವಿವರಗಳನ್ನು ನಿಮಗೆ ಸವಿಾಪವಿರುವ ಇದರ ಶಾಖೆಯಿಂದ ಪಡೆಯಬಹುದು.

ದಿ ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

ಸ್ಥಾಪನೆ 1906.] [ರಿಜಿಸ್ಟರ್ಡ್ ಆಫೀಸು: ಉಡುಪಿ, ಮೈಸೂರು ರಾಜ್ಯ

ವೆಂಕಟಗಿರಿ ಮಹಾತ್ಮೆ

ವೆಂಕಟಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖಚಿತವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ. ೫೯೯ ಪದ್ಯಗಳಿರುವ ೧೪ ಅಧ್ಯಾಯಗಳು ದಪ್ಪವಾದ ಕಾಗದ. ಮುದ್ದಾದ ಮುದ್ರಣ.



ಬೆಲೆ ರೂಪ್ಯಾ ೨—೮—೦ ಟಪಾಲು ಖರ್ಚು ಬೇರೆ

ಮಂಗಳೂರು ಪ್ರೆಸ್, ರಥಬೀದಿ, ಮಂಗಳೂರು.

ಡಿಕೊಳ್ಳಿ" ಎಂದು ಸವಿತೆ ಕಣ್ಣೀರು ತುಂಬಿ ಹೇಳಿದಳು.

ತನ್ನ ಮಗಳಲ್ಲಿ ಏನೋ ಒಂದಲಾವಣೆ ಯಾಗಿದೆ ಎಂದು ತಿಳಿಯಲು ತಾಯಿಗೆ ಹೆಚ್ಚು ಹೊತ್ತು ಹಿಡಿಯಲಿಲ್ಲ. "ನಿನಗೇ ನಾಗಿದೆ? ಮೈ ಚೆನ್ನಾಗಿಲ್ಲವೇ?" ಎಂದಾಕೆ ವಿಚಾರಿಸಿದಳು. ಅದಕ್ಕೆ ಸವಿತೆ—'ನನ ಗೇನಾಗಿದೆ? ಏನೂ ಆಗಿಲ್ಲವಮ್ಮಾ'ಎಂದು ನೋಲಿಂದ ಮೇಲೆ ಸಮಾಧಾನ ಹೇಳಿ ಸತ್ಯಾಂಶವನ್ನು ಬಹು ಕಾಲ ಬಚ್ಚಿ ವುದು ಸಾಧ್ಯವಿಲ್ಲವೆಂಬುದು ಸವಿತೆಗೆ ಷಣಿ ಗೆ ತೀ ಇತ್ತು.

ಸವಿತೆ ಹರೀಶನನ್ನು ಮದುವೆಯಾಗಲು ನಿರಾಕರಿಸಿದ್ದರೂ ಅವನ ಮೇಲಿನ ಪ್ರೇ ಮವನ್ನು ಆಕೆಗೆ ಮರೆಯಲು ಸಾಧ್ಯವಿರ ಲಿಲ್ಲ. ಅವನೊಂದಿಗೆ ಕೆಲಸ ಮಾಡಿ ಕೊಂಡಿರುವಷ್ಟು ಕಾಲ ಆ ಪ್ರಣಯಪಾಶ ಆಕೆಯನ್ನು ಬಂಧಿಸಿಯೇ ಇರುತ್ತದೆಂ ಬುದು ಆಕೆಗೆ ಗೊತ್ತಿತ್ತು.

ಹಾಗೆ ಹರೀಶನನ್ನು ನೋಡ್ತಿರುವು ದನ್ನು ಹೇಗಾದರೂ ಮಾಡಿ,ತಾನು ನಿಲ್ಲಿಸಿ ಬಿಡಬೇಕೆಂದು ಸವಿತೆಗೆ ಅನಿಸಿತು. ಆದರೆ ಆ ಆಫೀಸಿನಲ್ಲಿ ಅವನಿರುವಷ್ಟು ಕಾಲ ಅದು ಸಾಧ್ಯವಲ್ಲ. ಆಕೆಗೆ ನಿಜವಾಗಿ ಯೂ ಹರೀಶನನ್ನು ಮರೆಯಬೇಕೆಂದಿರು ವುದಾದರೆ ಅದಕ್ಕಿದ್ದ ಮಾರ್ಗ ಒಂದೇ. ಸವಿತೆ ಧೈರ್ಯದಿಂದ ಆ ಮಾರ್ಗವನ್ನೇ ಅವಲಂಬಿಸಿದಳು.

ಆಕೆ ಯಾಕೆ ತನ್ನ ಕೆಲಸ ಬಿಟ್ಟು ಹೋಗುತ್ತಿದ್ದಾಳೆಂಬುದು ಹರೀಶನಿಗೆ ಮಾತ್ರ ಗೊತ್ತು; ಆಕೆಯನ್ನು ಸಂಧಿಸಿ ವಿಷಯಗಳನ್ನು ಆಕೆಯೊಡನೆ ಚರ್ಚಿಸುವ ಧೈರ್ಯ ಅವನಿಗಿದ್ದಿಲ್ಲ. ಅದೇನಾದರೂ ತೆಯಲ್ಲಿ ಯಾವ ವ್ಯತ್ಯಾಸವನ್ನಾದರೂ ಅದು ಉಂಟು ಮಾಡುವ ಹಾಗಿರಲಿಲ್ಲ.

ಅಂದು ಸಂಜೆ ಸವಿತೆಯೊಬ್ಬಳೇ ಬಸ್ ನಿಲ್ದಾಣಕ್ಕೆ ನಡೆದಳು. ನಿರ್ವಂಚನೆಯ ಯೋಗ್ಯ ಸೇವೆ ಲ್ಲಿಸಿದ್ದ ಆಕೆಯ ರಾಜಿ ನಾಮೆಯನ್ನು ದಡ್ಡಿಡನೆ ಸ್ವೀಕರಿಸ ಲಾಗಿತ್ತು. ಪರಿ ಯನ್ನು ಮರೆತು ಆಕೆ ನಡೆದು ಬರುತ್ತಿದ್ದಂತೆ ಮುಂದೆ ತಾನು ಅನುಭವಿಸಬೇಕಾದದ್ದು ಏನೇನಿದೆಯೋ ಎಂದು ವಿಸ್ಮಯ ಪಡುತ್ತಿದ್ದಳು. ತಾಯಿ ಯನ್ನು ಸುಖವಾಗಿರಿಸಲು ತನ್ನಿಂದೇನು ಸಾಧ್ಯವೋ ಅದನ್ನೆಲ್ಲವನ್ನೂ ತಾನು ಮಾ ಡಲೇ ಬೇಕೆಂಬುದು ಆಕೆಯ ದೃಢ ನಿಶ್ಚಯ.

ನಾಳೆಯಿಂದ ಆಕೆ ಇನ್ನೊಂದು ಕೆಲಸ ಹುಡುಕಿಕೊಂಡು ಹೋಗಬೇಕು; ಮತ್ತ ದನ್ನಾಕೆ ಬೇಗನೇ ಕಂಡುಕೊಳ್ಳಬೇಕು. ಅದು ಬೇಗನೇ ಎಲ್ಲಿಯೂ ಸಿಕ್ಕದೆ ಹೋ ದರೆ ಕೊನೆಗೆ ತಾಯಿ ತನ್ನ ಜೀವನೋಪಾ ಯಕ್ಕಾಗಿ ಎಲ್ಲಿ ಕೆಲಸ ಮಾಡುತ್ತಿದ್ದ ಳೋ ಆ 'ಸಿಲೊಲಾಯ್ಡ್' ಕಾರ್ಖಾನೆ ಗೇಟಿನ ಕಡೆಯಲ್ಲಾದರೂ ತಟ್ಟುತ್ತಿರ ಬೇಕು! (ಅವಲಂಬನ



ಕಂಠೀರವ'ನಿಗೆ
ಚಂದಾದಾರರಾಗಿರಿ

- ಗುಂಡನ ಗಜೇಟು -

ತ್ರಿಲೋಕಾಧಿಪತಿ ರಾವಣೇಶ್ವರ ವಿಮಾನದಲ್ಲಿ ಸಂಚರಿಸುತ್ತಿದ್ದ ನಂತೆ ಆ ಕಾಲದಲ್ಲಿ. ಈ ಕಾಲದಲ್ಲಿ ದುಡ್ಡಿದ್ದವರು ಸಮಯವಿದ್ದವರು ಯಾರೇ ಆಗಲಿ, ಅಂಥವರಿಗೆ ಲಂಡನ್ ಪ್ಯಾರಿಸ್ ಮೊದಲಾದ ಮಹಾ ನಗರಗಳ ವಿಮಾನ ಯಾತ್ರೆ ಅನ್ನೋದು ನಡುಮನೆ ಅಡಿಗೆ ಮನ ಇದ್ದ ಹಾಗೆ. ಇನ್ನು ಕ್ಷಣ ಕಾಲ ದಲ್ಲಿನ ಅಡಿಗೆಗಾಗಿ ಯಾಂತ್ರಿಕ ಒಲೆ ಇರು ವಂತೆ ಕೂತಲ್ಲಿ ನಿಂತಲ್ಲಿ ಮಲಗಿದಲ್ಲಿ ನಡೆ ಯುವಲ್ಲಿ ಅನ್ನ ತಿಂಡಿ ಕಾಫಿ ಚಾ ತಂದು ಬಾಯಿ ತೆರೆಯಿಸಿ ಗಂಟಲೊಳಗೆ ತುರು ಕುವ ಹೊಯ್ಯುವ ಯಾಂತ್ರಿಕ ಇಕ್ಕು ಳಿದ ಸಾಧನಕ್ಕಾಗಿ ಕಾದು ಕೂತವಠ್ಠೂ, ಪಾತಾಳ ಲೋಕಕ್ಕೂ ಒಯ್ಯುವ ಹೊಸ ಮೋಟಾರ್ ಕಾರಿನ ನಿರ್ಮಾಣ ಈ ವಿಜ್ಞಾನ ಯುಗದಲ್ಲಿ ಯಾವಾಗ ಆದೀ ತೋ ಎಂದು ಆತುರಗೊಂಡವರೂ ಅವರ ಜತೆಗೆ ಸ್ವರ್ಗಲೋಕಕ್ಕೇರಿಸುವ ಒಂದು ದಿವ್ಯ ವಿಮಾನವೋ ರತ್ನಖಚಿತ ಪಲ್ಲಕ್ಕಿ ಯೋ ಯಾಕೆ ತಯಾರಾಗಬಾರದೆಂದು ನಿರೀಕ್ಷಿಸುವವರೂ ಎಷ್ಟೋ ಮಂದಿ.

ಇವರಲ್ಲೆಲ್ಲ ತಾವು ಸ್ವರ್ಗಕ್ಕೆ ಹೋಗ ಬೇಕೆನ್ನುವವರದೇ ಬಹು ಪಕ್ಷ. ಅದಕ್ಕೆ ಪುಣ್ಯ ಬೇಕು. ಅದನ್ನು ಸಂಪಾದಿಸುವ ಅಥವ ಕೊಂಡುಕೊಳ್ಳುವ ರೀತಿ ಹಲವು. ಗಡಗಡ ನಡುಗುವ ಕೈ ಕಾಲು ಕೊಕ್ಕೆ ಕಟ್ಟುವ ಚಳಿಯಲ್ಲಾದರೂ ಗಂಗಾ ತುಂಗಾ ಮುಂತಾದ ನದಿಗಳಲ್ಲಿ ಸ್ನಾನ ಮಾಡಿದ್ದಾದರೆ ಪುಣ್ಯವಂತೆ.. ಗ್ರಹಣ ಕಾಲದಂಥ ವಿಶೇಷ ದಿನಗಳಲ್ಲಿ ಕೊಳಕು ನೀರಿನ ತೀರ್ಥಗಳಲ್ಲಿ ಮೂಗು ಹಿಡಿದು ಮೂರು ಮುಳುಗು ಹಾಕಿದರೆ ಪುಣ್ಯ ವಂತೆ. ಮುದುಕರಾಗಿ ಮನೆಯೊಳಗಿನ ಜಗಳದಿಂದ ವೈರಾಗ್ಯ ಹುಟ್ಟಿದ ಮೇಲೋ ಉದ್ಯೋಗ ನಿವೃತ್ತರಾಗಿ ಕಾಲ ಕಳೆಯು ವುದು ಕಷ್ಟವಾದ ಮೇಲೋ ಅಂಥವರು ಕೆಲವರು ತೂಕದಿ ಆಕಳಿಸುತ್ತ ಹರಿ ಕಥೆ ವೇದಾಂತ ಪುರಾಣ ಶ್ರವಣ ಮಾಡು ವುದಾದರೆ, ಕಾಶಿ ರಾಮೇಶ್ವರ ತಿರುಪತಿ ಯಾತ್ರೆ ಮಾಡಿ ಬಂದವರ ಕಾಲು ಮುಟ್ಟಿ ದೆವೆಂದರೆ ಪುಣ್ಯವಂತೆ. ಹೀಗೆ ಪುಣ್ಯ ಸಂಪಾದಿಸುವ ಅಥವ ಕೊಂಡುಕೊಳ್ಳುವ ವಿಧಾನಗಳಲ್ಲಿ ಇವು ಕೆಲವು.

ನನ್ನ (ಗುಂಡನ) ಅಜ್ಜಿ ಪುಣ್ಯ ಜಮೆ ಮಾಡುತ್ತಿದ್ದ ಆ ರೀತಿಯೊಂದು ಬೇರೆ ಯೇ ಆಗಿತ್ತು. "ಏಕಾದಶಿ ನನಗೆ ಉಪ ವಾಸ" ಎಂದು ವಾರಕ್ಕೆ ಮೊದಲೇ ಮನೆಯಲ್ಲಿ ಡಂಗುರ ಸಾರುತ್ತ ಬರುತ್ತಿ ದ್ದಳು. ಏಕಾದಶಿ ನಾಳೆ ಎನ್ನುವಾಗ ಮುನ್ನಾ ದಿನ ದಶಮಿಯಂದು ಕಡುಬು ದೋಸೆ ಪಾಯಸದ ಅಡಿಗೆ ತಯಾರಿಸಿ ಎರಡು ದಿನ ಕಳೆದರೂ ತಿಂದದ್ದು ಕರಗ ದಷ್ಟು ಮಟ್ಟಿಗೂ ಹೊಟ್ಟೆಗೆ ಭರ್ತಿ ಮಾಡಿ ಕೊಳ್ಳುವಳು. ಏಕಾದಶಿಯ ದಿನವಿಡೀ ದೇವರ ಕೋಣೆಯಲ್ಲಿ ಮಲಗಿ ಅಲ್ಲಿ ಪಾತ್ರ ದಲ್ಲಿ ತುಂಬಿಟ್ಟ ಅವಲಕ್ಕಿಯನ್ನು ಅಲ್ಲೇ ನೆಲುವಿನಲ್ಲಿ ಹೆಪ್ಪು ಹಾಕಿಟ್ಟ ಕೆನೆ ಮೊಸ ರಲ್ಲಿ ಕಲಸುವಳು. ದೇವರ ಸ್ಮರಣೆ ಮಾಡುತ್ತ ಆ ಮೊಸರವಲಕ್ಕಿಯ ಒಂ ದೊಂದೇ ಮುದ್ದೆಯನ್ನು ನುಂಗುವಳು. 'ನಿಟ್ಟುಪವಾಸ'ದ ಆಯಾಸ ನಟಿಸುತ್ತ ಆಗಾಗ 'ಉಸ್ಸಪ್ಪ, ಅಯ್ಯಪ್ಪ' ಅಂತ ಉಸಿರೆಳೆಯುವಳು. (ಈ ಆಯಾಸ ನಟ ನೆಯ ಉಸಿರಾಟ ಅವಲಕ್ಕಿ ಮೊಸರು ತಿಂ ದದ್ದು ಹೆಚ್ಚಾಗಿ ಎಂದು ಯಾರೂ ಅರ್ಥ ಮಾಡಬಾರದು) ಹೀಗೆ ಅಂದು ಏಕಾದಶಿ ಉಪವಾಸ ವ್ರತ ಸಾಂಗ ಮಾಡಿ ಸ್ವರ್ಗದ ಹಾದಿಯಲ್ಲಿ ಕಲ್ಲು ಮುಳ್ಳೊಂದೂ ಇರ ದಂತೆ ನೋಡಿಕೊಳ್ಳುತ್ತ ಬರುವುದು ಆಕೆಯ ಸಂಪ್ರದಾಯ. ಏಕಾದಶಿಯಂದು ಮನೆಯವರು ಯಾರೂ ಆಕೆಯನ್ನು ಮಾತಾಡಿಸಕೂಡದು ಅಂತ ಕಟ್ಟಪ್ಪಣೆ. ಅಂದು ಒಗ್ಗರಣೆ ಮಸಾಲೆ ಹುರಿಯುವ ಸದ್ದು ಆ ಗಿದಲ್ಲಿಗೆ ಕೇಳಿಸಿದರೆ ಸಾಬೂನು ಕಾಫೀ ಪುಡಿ ಬಟಾಟೆ ನೀರುಳ್ಳಿ ನುಗ್ಗೇ ಕಾಯಿ ಬದನೇಕಾಯಿ ಸೋರೆಕಾಯಿ ಹೆಸರನ್ನು ಯಾರಾದರೂ ಮನೆಯಲ್ಲಿ ಗಟ್ಟಿಯಾಗಿ ಉಚ್ಚರಿಸಿ ಬಿಟ್ಟರೆ ತನ್ನ ಏಕಾದಶೀ ವ್ರತ ಭಂಗವಾಗುತ್ತದೆ ಅಂತ ಅವಳೆನ್ನುವಳು. ಇಂಥವರಿಗೆ ಸ್ವರ್ಗದ ಗೇಟು ತೆರೆಯುತ್ತದೋ ಇಲ್ಲವೋ ಎಂದು ಆ ಸ್ವರ್ಗ ಲೋಕವನ್ನಿನ್ನೂ ನಮ್ಮ ವಿಜ್ಞಾನಿಗಳು ನೋಡಿ ಬಂದು ಹೇಳದಿರುವ ಕಾರಣ ವೇನೋ ಯಾರು ಹೇಳುವವರು?

(ಅನೇ ಪುಟ ನೋಡಿ)



[ಸ್ಥಾಪನೆ: 1924]
ದಿ ಕರ್ನಾಟಕ ಬೇಂಕ್ ಲಿಮಿಟೆಡ್
(ಶೆಡೂಲ್ಡ್ ಬೇಂಕ್)
ಪ್ರಧಾನ ಕಾರ್ಯಾಲಯಃ ಮಂಗಳೂರು.
ಈ ಕೆಳಗಿನ ಬಡ್ಡಿಯ ದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದು ತಿಂಗಳಿಗೆ	..	ಸಾ। ಸೇಕಡ ರೂ. 3-75
ಮೂರು ತಿಂಗಳಿಗೆ	..	,, ,, 4-00
ಆರು ತಿಂಗಳಿಗೆ	..	,, ,, 4-25
12 ತಿಂಗಳಿಂದ 23 ತಿಂಗಳ ವರೆಗೆ		,, ,, 4-50
24ರಿಂದ 48 ತಿಂಗಳ ವರೆಗೆ	..	,, ,, 4-75

ನಿಮ್ಮ ದಿನದಿನದ ಉಳಿತಾಯಗಳನ್ನು "ಹನಿ ಡಿಪೋಜಿಟ್"ಗಳಲ್ಲಿ ನಿಯೋಜಿಸಿರಿ.
THE KARNATAKA BANK LIMITED

ಮೋಟರ ವ್ಯವಸಾಯದಲ್ಲಿ ನಮ್ಮ ಜಿಲ್ಲೆಯ ಅಪೂರ್ವ ಪರಿಶ್ರಮ
ಕೆನರಾ ವರ್ಕ್ಸ್ ಶೂಪಿನ ಸ್ಪ್ರಿಂಗುಗಳ ತಯಾರಿಕೆ
ಹಿಂದುಸ್ಥಾನದಲ್ಲಿರುವ ಮೂರು ಕಾರ್ಖಾನೆಗಳಲ್ಲಿ ಇದು ಒಂದು
ಹಿಂದುಸ್ಥಾನದಲ್ಲಿ ತಯಾರಾಗುವ ಇತರರ ಎಲ್ಲಾ ಸ್ಪ್ರಿಂಗುಗಳಿಗಿಂತಲೂ ಇದು ಶ್ರೇಷ್ಠತರದ್ದು.
ಕೆಳಗಿನ ಚಿಹ್ನೆ ನೋಡಿ ಸ್ಪ್ರಿಂಗನ್ನು ಪಡೆಯಿರಿ:

ಬಸ್ಸಿಗೆ ಹಾಕಿ ಪರೀಕ್ಷಿಸಿ ಶ್ರೇಷ್ಠವೆನ್ನಿಸಿಯದೆ. ಮೇಶೀನುಗಳಲ್ಲಿ ಪರೀಕ್ಷಿಸಿ ಶ್ರೇಷ್ಠವೆನ್ನಿಸಿಯದೆ. ವಿಲಾಯತಿ ಸ್ಪ್ರಿಂಗುಗಳೊಡನೆ ಕೆಲಸ ಮಾಡಿಸಿ ಸರಿಹೋಲಿಸಿ ಶ್ರೇಷ್ಠವೆನ್ನಿಸಿಯದೆ.
The Canara Workshops Ltd., Mangalore-3

Printed and Published by M. Baburaya Prabhu, B. A. at the Mangalore Press, Car Street, Mangalore. Editor: Hurli Bhima Rao.

ವ್ಯಕ್ತಿ ಚಿತ್ರ:

ಗಡಿನಾಡಿನ ಪ್ರಧಾನಿ

ಡಾ|| ಖಾನ್ ಸಾಹೇಬ್

ನಂಧಿ ಎಂದು ಕರೆಯ
ನ್ ಅಬ್ದುಲ್ ಗಫರ್
ಮ್ಮ ಖಾನ್ ಬಂಧು
ಭಾರತದಲ್ಲಿ ಪ್ರಸಿದ್ಧ
ಮ್ಮಂದಿರು ಜೀವನ
ಯನ್ನು ಹಿಡಿದ
ಒಂದೇ ಗುರಿ
ದ
ಜನ
ಇಲ್ಲ;
ಡಿದು ಧ ನ್ನುವು
ತ್ತು. ಇವರಿಗೆ "ಹೊಡಿ"
ಮದ ಇಂತಹ ಅಸಂ
ರಿಗೆ ತಮ್ಮ ರಾಜ
ು ಬೇಕಾಗಿದ್ದರು.
ುತೆ ಎಂದರೇನು?
ಯದ ಇಂತಹ
ತಂತ್ರ್ಯ ಮನೋ
ದ ಕೀರ್ತಿ ಖಾನ್ ಬಂ
ದೆ. ಗಡಿನಾಡಿನಲ್ಲಿ ಅವ
ುವ ತಾರೆಗಳಾಗಿ ಜನತೆಯ
ಕರಾಗಿದ್ದಾರೆ.

ಷ್ಟೆಯನ್ನು ಕಲಿವುದು ಹಿಂದು
ಂದು ಕಾಲದಲ್ಲಿ ಹೇಗೆ
ಗಿ ಕಾಣುತ್ತಿತ್ತೋ, ಹಾ
ಕೂಡ ಇತ್ತು.
ಸಾಹೇಬರ ಜನಕರಾದ
ನ್ ಬೆಹ್ರಾ ಖಾನರು ಖಾಜಿಗಳ
ಷ್ಕಾರ ಮೊದಲಾದ ಬೆದ
ಗುಂದದೆ, ತನ್ನ ಮಗನಿಗೆ
ವಿದ್ಯಾಭ್ಯಾಸವನ್ನು ಕೊಡಿಸಿ
ದುದರಿಂದ ಖಾನ್ ಸಾಹೇಬರು
ಂಗ್ಲಿಷ್ ಕಲಿತವರ ಪೈಕಿ ತನ್ನ ದೇಶದಲ್ಲಿ
ಪ್ರಥಮರೆನಿಸಿದರು.

ಖಾನ್ ಸಾಹೇಬರು ಮುಂದೆ ಇಂಗ್ಲಂಡಿಗೆ ಹೋಗಿ ಕಲಿತರು. ಅಲ್ಲಿ ಜವಾಹರಲಾಲ ನೆಹರೂ ಅವರ ಸಹಪಾಠಿಯಾಗಿದ್ದರು. ಅವರು ಅಂತರ್ರಾಷ್ಟ್ರೀಯತೆಯನ್ನು ಮನನ ಮಾಡಿದರು. ಖಾನ್ ಸಾಹೇಬರ ಮತ್ತು ನೆಹರೂ ಅವರ ಶಿಕ್ಷಣ್ಯಸ್ನೇಹಗಳು ಹಿಂದೀ ರಾಜಕಾರಣದಲ್ಲಿ
ವಾದ ಎಚಾ ಮತ್ತು
ಟಿ ಕೆ ಗ ಳ ನ
ವೈದ

ಗಡಿನಾಡನ್ನು ಆಗಲಿ ಮಾಡುತ್ತಿದ್ದ ಸಿಪಾಯಿಗಳು ಹಿಂಸಾಪರರಾಗಿದ್ದರು. ಗಡಿನಾಡಿನ ಎಲ್ಲ ಕಡೆಯಲ್ಲಿಯೂ ನವಜೀತನವು ಒಡೆದುಕಾಣುತ್ತಿತ್ತು. ಜಲಿಯಾನ್‌ವಾಲಾ ಬಾಗಿನ ದುರಂತ ನಾಟಕವು ದೇಶದ ಉದ್ದಗಲಗಳಲ್ಲಿಯೂ ಕ್ಷೋಭೆಯನ್ನು ತಂದೊಡ್ಡಿತ್ತು.

ಈ ಸ್ಥಿತ್ಯಂತರಗಳು ಡಾ| ಖಾ| ಸಾಹೇಬರ ಮೇಲೆ ಪರಿಣಾಮವನ್ನು ಉಂಟುಮಾಡದೆ ಇರಲಿಲ್ಲ. ವಜೀರೀಸ್ತಾನವು ಬ್ರಿಟಿಷರ ಮೇಲೆ ದಂಗೆ ಎದ್ದಿತ್ತು. ಇದನ್ನು ಹತ್ತಿಕ್ಕಲು ಖಾನ್ ಸಾಹೇಬರಿದ್ದ ದಂಡು ಇದರ ಮೇಲೆ ಅಭಿಯೋಗವನ್ನು ಮಾಡಬೇಕೆಂದು ಆಜ್ಞೆಯು ಹೊರಟಿತು. ವಜೀರೀಸ್ತಾನವೂ, ಗಡಿನಾಡೂ ಅಣ್ಣ ತಮ್ಮಂದಿರ ಹಾಗೆ. ಅಲ್ಲಿಯ ಜನರು ರಕ್ತ ಸಂಬಂಧಿಗಳೂ ಧರ್ಮಾನುವರ್ತಿಗಳೂ ಆಗಿದ್ದರು. ಇಂತಹ ದೇಶದ ಮೇಲೆ ತಾನು ಕೈ ಎತ್ತುವುದೆ? ಡಾ| ಖಾನರ ಮನಸ್ಸು ಇದಕ್ಕೆ ಒಡಂಬಡಲಿಲ್ಲ. ಕೂಡಲೇ ಅವರು ತನ್ನ ಸ್ಥಾನಕ್ಕೆ ರಾಜೀನಾಮೆಯನ್ನಿತ್ತರು. ಆಗ ಅವರು ರಾಜಕಾರಣದಲ್ಲಿ ಪ್ರವರ್ತಿಸುವಷ್ಟು ತರಬೇತಾಗಿರಲಿಲ್ಲ. ಅದಕ್ಕಾಗಿ ಅವರು ಪೇಶಾವರದಲ್ಲಿ ಖಾಸಗಿ ವೈದ್ಯ ವೃತ್ತಿಯನ್ನು ಆರಂಭ ಮಾಡಿದರು. ಈ ವೃತ್ತಿಯಲ್ಲಿ ಅವರು ಬುದ್ಧಿವಂತರೂ, ನುರಿತವರೂ ಆಗಿದ್ದುದರಿಂದ ಅವರ ಪ್ರಸಿದ್ಧಿಯು ಬೇಗನೇ ಹೆಚ್ಚಿತು. ಸಂಪಾದನೆಯೂ ಕೈ ತುಂಬ ಆಯಿತು.

ಅಬ್ದುಲ್ ಗಫಾರ್ ಖಾನರು ೧೯೨೧ರಲ್ಲಿ ಜನತೆಗೆ ರಾಷ್ಟ್ರೀಯ ಶಿಕ್ಷಣವನ್ನು ಕೊಡುವ ಉದ್ದೇಶದಿಂದ "ಅಜಾದ್ ಶಿಕ್ಷಣ ಶಿಬರ"ವನ್ನು ಸ್ಥಾಪಿಸಿದರು. ಆದರೆ, ಇದನ್ನು ಸರಕಾರವು ಮುಟ್ಟುಗೋಲು ಹಾಕಿತು. ಅಲ್ಲದೆ ಅಬ್ದುಲ್ ಗಫಾರ್ ಖಾನರ ಬಂಧನವೂ ಆಯಿತು. ಇದರಿಂದ ಡಾ| ಖಾನ್ ಸಾಹೇಬರು ಕೆರಳಿದರು, ಕ್ರಾಂತಿಯ ಕಿಡಿಗಳು ಅವರ ಸರ್ವಾಂಗವನ್ನು ವ್ಯಾಪಿಸತೊಡಗಿದವು.

೧೯೩೦ನೇ ಇಸವಿ. ಗಾಂಧೀಜಿಯವರ ದಂಡೀ ಯಾತ್ರೆಯ ಕಾಲವದು. ಖಾನ್ ಸಾಹೇಬರು ರಾಜಕಾರಣಕ್ಕೆ ಧೃಡ ನಿರ್ಧಾರದಿಂದ ಪ್ರವೇಶಿಸಿದುದು ಅದೇ ಕಾಲದಲ್ಲಿ! ಅವರು ಇತರ ದೇಶಗಳಂತೆಯೇ ಮಹಾ ಸೆಗೆ'ಓ'ಕ್ಕೂ ಇರಲಿಲ್ಲ. ಅಂದಿನ ಯಾ ರೂ

ಪರಿಗಣಿಸಲ್ಪಟ್ಟಿತು. ಆಗಲೇ ರುದ್ರ ನಾಟಕ ಒಂದೂ ನಡೆಯಿತೆನ್ನಬೇಕು. ಸಿಪಾಯಿಗಳ ಕೋವಿಗಳು ಜನತೆಯ ಮೇಲೆ ನಿರ್ದಯವಾಗಿ ಬೆಂಕಿಯ ಜ್ವಾಲೆಯನ್ನು ಕಾರುತ್ತಿದ್ದವು. ಹೆಣದ ರಾಶಿಗಳು ಬಿದ್ದವು. ಖಿಸ್ಸಾ ಖಾನಿ ಬಜಾರದಲ್ಲಿ ನಡೆದ ದುರಂತವನ್ನು ನೋಡಿದ ಮೇಲಂತೂ ಖಾನ್ ಸಾಹೆಬರ ಹೃದಯವು ತಲ್ಲಣಿಸಿ ಹೋಯಿತು. ಅಂದಿನ ಘಟನೆಯು ಅವರು ರಾಜಕಾರಣದಲ್ಲಿ ಪ್ರವೇಶಿಸುವ ದೀಕ್ಷೆಯನ್ನು ವಹಿಸಲು ಪ್ರೇರೇಪಿಸಿತು. ಅವರ ಹುಟ್ಟು ಗ್ರಾಮವಾದ ಉತಮಂಝಾಯಿಯು ಕ್ಷಣಮಾತ್ರಕ್ಕೆ ಅಧಿಕಾರಿಗಳ ದಬ್ಬಾಳಿಕೆಗೆ ಸಿಲುಕಿ ಮಸಣವಾಯಿತು; ಶಾಂತ ಜನರನ್ನು ಹೊಡೆದು, ಬಡೆದು, ಕಟ್ಟಿ ಹಾಕಿ ಪೀಡಿಸಿದರು. ಉರಿಯುವ ಬೆಂಕಿಯಲ್ಲಿ ಬತ್ತಲೆಯಾಗಿ ಗಂಟೆಕಟ್ಟಿ ಕಾಲ ನಿಲ್ಲಿಸಿದರು. ಬಿಸಿಲಿನಲ್ಲಿ ಗುಡ್ಡಕ್ಕೆ ಕಲ್ಲುಗಳನ್ನು ಹೊರಿಸಿದರು. "ಇವು ನಿಮ್ಮ ಮುಖಂಡರ ಸಮಾಧಿಯನ್ನು ಕಟ್ಟಲು ಕಲ್ಲುಗಳು!" ಎಂದು ಅವರನ್ನು ಹಂಗಿಸಿದರು.

ಇವರು ನಡೆಸಿದ ಗಳು ಖಾನರನ್ನು ರೋಷಗೊಳಿಸಿತು. ತಮ್ಮನೆ ಕೂಡ ಅಣ್ಣನೂ ಆ ಮೊದಲ್ಗೊಂಡು, ಬ್ರಿಟಿಷರ ಕಡು ವೈರಿಯಾಗಿ ಪರಿಗಣಿಸಲ್ಪಟ್ಟನು.

ಅನಂತರ ಎಂಬಿನಂತೆ ಬಂತು ೧೯೩೯ರ ದಬ್ಬಾಳಿಕೆಯು. ಏನೇ ಅಂಕ. ಪುನಃ ಗಡಿನಾಡಿನಲ್ಲಿ ಆದೆ ಹಿಂಸಾ ಕಾಂಡಕ್ಕೆ ಮೊದಲಾಯಿತು. ಜವಾಹರಲಾಲರೊಡನೆ ಅಲಹಾಬಾದಿನಲ್ಲಿ ಕ್ರಿಸ್‌ಮಸ್ ರಜೆಯನ್ನು ಕಳೆಯಲು ಹೊರಟಿದ್ದರು ಖಾನರು. ಆಗಲೇ ಅವರ ದಸ್ತಗಿರಿಯಾಯಿತು. ೧೯೩೪ರ ವರೆಗೆ ಅಲಹಾಬಾದಿನ ಬಂಧಿವಾಸದಲ್ಲಿ ಅವರು ಕೊಳೆಯ ತೊಡಗಿದರು.

ಆ ನಂತರ ಅವರ ಬಂಧ ಎಮೋಚನೆಯಾಯಿತಾದರೂ, ಗಡಿನಾಡಿನಲ್ಲಿ ಕಾಲಿಕ್ಕದಂತೆ ಸರಕಾರವು ಅವರನ್ನು ಪ್ರತಿಬಂಧಿಸಿತು. ಅಣ್ಣ ತಮ್ಮ ಇಬ್ಬರೂ ಗಾಂಧೀಜಿಯವರ ಆಮಂತ್ರಣವನ್ನು ಸ್ವೀಕರಿಸಿ ವಾರ್ಧಾದಲ್ಲಿ ಉಳಿದರು.

ಕೇಂದ್ರಶಾಸನ ಸಭೆಗೆ ಅದೇ ವರುಷ ಗಡಿನಾಡಿನ ಒಬ್ಬ ಸದಸ್ಯನನ್ನು ನಾಯಿಸಿ ಕಳುಹಿಸುವ ಹಕ್ಕನ್ನು ಕೊಟ್ಟಿತು ಸರಕಾರ. ಗಾಂಧಿಜಿಯವರ ಒತ್ತಾಯಕ್ಕಾಗಿ ಖಾನ್ ಸಾಹೇಬರು ಉಮೇದುವಾರರಾಗಿ ನಿಂತರು. ಚುನಾವಣೆ ಗಡಿನಾಡಿನಲ್ಲಿ; ಖಾನ್ ಸ ಾರ್ಥದಲ್ಲಿ. ಆದರೆ



ಬಟ್ಟೆಗಳನ್ನು ಶುಭ್ರಮಾಡಲು ಒರಟಾಗಿ ಬಡಿಯುವುದರಿಂದ ವಾರ ವಾರಕ್ಕೂ ಅಗತ್ಯವಿಲ್ಲದ ದುಬಾರಿಯ ಲುಕ್ಸಾನು — ಹರಿಯುವುದು ಮತ್ತು ತುಂಬಾ ರಂಧ್ರಗಳು ಆಗುತ್ತವೆ.

ನಂಬರಿರುವ ಈ ಚಿತ್ರಗಳಲ್ಲಿ ವಿವರಿಸಿರುವ ಈಗನ ಒಗೆಯುವ ರೀತಿ ಮತ್ತು ಕೆಳಗೆ ಕೊಟ್ಟಿರುವ ಸೂಚನೆಗಳೂ, ನಿಮ್ಮ ಬಟ್ಟೆಗಳನ್ನು ಬಡಿದು ಲುಕ್ಸಾನಾಗದಂತೆ ನಿಜವಾಗಿಯೂ ಶುಭ್ರವಾಗಿ ಹೇಗೆ ಒಗೆಯುವುದೆಂಬುದನ್ನು ತೋರಿಸುತ್ತದೆ. (1) ಒಗೆಯುವ ಬಟ್ಟೆಗಳನ್ನು ಚೆನ್ನಾಗಿ ನೆನೆಯಿಸಿರಿ— ನಲ್ಲಿಯ ಕೆಳಗೆ, ಟಬ್ಬಿನಲ್ಲಿ, ಕೆರೆಯಲ್ಲಿ, ಎಲ್ಲಿ ನೆನೆಯಿಸಿದರೂ ವ್ಯತ್ಯಾಸವಿಲ್ಲ. (2) ಬಟ್ಟೆಯು ಚೆನ್ನಾಗಿ ನೆನೆದ ಮೇಲೆ ಸನ್‌ಲೈಟ್ ಸೋಪನ್ನು ಜ್ಜಿರಿ (ಬಹಳ ಕೊಳೆಯಾದ ಸ್ಥಳಗಳಲ್ಲಿ ಸ್ವಲ್ಪ ಹೆಚ್ಚು ಸನ್‌ಲೈಟನ್ನು ಹಾಕಿರಿ). (3) ಈಗ ಬಟ್ಟೆಯನ್ನು ಮೆಲ್ಲನೆ ಚೆನ್ನಾಗಿ ಹಿಸುಕಿರಿ. ಬಡಿಯಬೇಡಿರಿ. ಸೋಪಿನ ನೊರೆಯು ಬಟ್ಟೆಯ ಪದರಗಳಿಗೆ ಚೆನ್ನಾಗಿ ಸೇರುವಂತೆ ಹಿಸುಕಿರಿ. ಬಿರುಸಾಗಿ ಅಥವ ಪದೇಪದೇ ಉಜ್ಜಬೇಕಾದ ಅಗತ್ಯವಿಲ್ಲ. ಬಟ್ಟೆಯನ್ನು ಚೆನ್ನಾಗಿ ಹಿಸುಕಿ ಕೊಳೆಯನ್ನು ಮುಟ್ಟಿದೆ ಎಂದು ಧೃಢಮಾಡಿಕೊಳ್ಳಿರಿ. ನೊರೆಯಲ್ಲಿನ ಚುರುಕಾಪು ಸೋಪು ಕೊಳೆಯನ್ನು ನೊರೆಯಲ್ಲಿ ಹಿಡಿದಿಡ

ಖಾನ್ ಜನಪ್ರಿಯತೆಯು ಅವರಿಗೆ ಚು[illegible]ಣೆಯಲ್ಲಿ ಯಶಸ್ಸನ್ನು ತಂದಿತು. ಸರಕಾರವು ಅವರನ್ನು ಸೋಲಿಸುವ ಆಟವನ್ನೆಲ್ಲ ಹೂಡಿತ್ತು. ಕೊನೆಗೆ ಖಾನ್ ಸಾಹೇಬರ ಮೇಲಿನ ಸೇಡನ್ನು, ಅಬ್ದುಲ್ ಗಫಾರ್ ಖಾನರ ದಸ್ತಗಿರಿಯ ಮೂಲಕ ಸರಕಾರವು ತೀರಿಸಿಕೊಂಡಿತು.

೧೯೩೬-೩೭ರಲ್ಲಿ ನಡೆದ ಶಾಸನ ಸಭೆಯ ಚುನಾವಣೆಯಲ್ಲೂ ಖಾನ್ ಸಾಹೇಬರೇ ಚುನಾಯಿತರಾಗಿ, ಪ್ರಧಾನಿ ಪಟ್ಟವನ್ನು ಪಡೆದರು. ಆಗ ಖಾನ್ ಅಬ್ದುಲ್ ಗಫಾರ್ ಖಾನರನ್ನು ಗಡಿನಾಡಿಗೆ ಪ್ರವೇಶಿಸದಂತೆ ಸರಕಾರವು ಪ್ರತಿಬಂಧಿಸಿತ್ತು. ಜವಾಹರಲಾಲರಿಗೂ ಚುನಾವಣಾ ಪ್ರಚಾರಕ್ಕೆ ಗಡಿನಾಡಿನಲ್ಲಿ ಪ್ರವೇಶವನ್ನು ಸರಕಾರವು ಕೊಟ್ಟರಲ್ಲಿ; ಸರದಾರ ವಲ್ಲಭ ಭಾಯಿ ಪಟೇಲರಿಗೂ ಪೇಶಾವರದಿಂದ ಈಚೆಗೆ ಪಾದಾರ್ಪಣ ಮಾಡದಂತೆಯೂ ಅಪ್ಪಣೆ ಇತ್ತು. ಸರಕಾರದ ಇಷ್ಟೊಂದು ವಿರೋಧ—ಪ್ರತಿಬಂಧಕಗಳಿದ್ದರೂ, ಗಡಿನಾಡಿನಲ್ಲಿ ಕೊಂಗ್ರೆಸೇ ಗೆದ್ದಿತು.

೧೯೩೯ರಲ್ಲಿ ಎರಡನೇ ಮಹಾ ಯುದ್ಧದ ಕಾಲದಲ್ಲಿ ಖಾನ್ ಸಾಹೇಬರು ಇತರ ತನ್ನ ಅನುಯಾಯಿ ಮಂತ್ರಿಗಳೊಂದಿಗೆ ಮಂತ್ರಿಮಂಡಲಕ್ಕೆ ರಾಜೀನಾಮೆ ಇತ್ತರು.

"ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗ ಬೇಡಪ್ಪಾ"

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ದಮ್ಮನ್ನು ಬರೇ ದುಮುಕಿ ಇಡದೆ ಅದನ್ನು ಬೇರು ಸಹಿತ—ಕಿತ್ತು ಒಗೆಯುವದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನ ಕ್ರಿಯೆಯು ತಿದ್ದುವದು; ಪುಷ್ಟುಸಗಳು ಗಟ್ಟಿಯಾಗುವವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ಥಮ್ಮು, ತೇಕು, ಬೆನ್ನುನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತ—ಶ್ವಾಸಹಾರೀ ಪ್ಲೇಸ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತೂ ಆಮ್ಲ ಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಾಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔಂ. ೬ ಔಂ. ೧೨ ಔಂ. ಬಾಟ್ಲಿಗೆ ಕ್ರಮವಾಗಿ ರೂ. ೩—೬—೦, ರೂ. ೫—೧೨—೦, ಪತ್ತು ರೂ. ೧೦—೨೨—೦.

ಪುರೋಹಿತ [illegible]ರ್ಮಸಿ, [illegible]ಲ್ಹಾಪುರ

ಮುಂ.

ಮೊನ್ನೆ ನಡೆದ ಚುನಾವಣೆಯಲ್ಲಿಯೂ ಗಡಿನಾಡಿನಲ್ಲಿ ಕೊಂಗ್ರೆಸಿಗೇ ಜಯ! ಡಾ। ಖಾನ್ ಸಾಹೇಬರು ಪ್ರಧಾನಿ ಪಟ್ಟದ ದಂಡವನ್ನು ಪುನಃ ಎತ್ತಿಕೊಂಡಿದ್ದಾರೆ!

—೫೦—

ಬಡೋದಾ ಶಾಸನಸಭಾ ಸದಸ್ಯರ ಮನೆಗೆ ಬೆಂಕಿ ಹಚ್ಚಿದರು

ಬಡೋದಾ ಸಂಸ್ಥಾನದ ಎಸೆಂಬ್ಲಿಯ ೫೫ ಮಂದಿ ನಾಮಕರಣದ ಮುಸ್ಲಿಮರಲ್ಲಿ ಎ. ಯುಸೇಫ್ ಕೆ. ಪಾಟೇಲರೆಂಬವರೂ ಒಬ್ಬರಾಗಿದ್ದು ಅವರ ನಾಮಕರಣದ ಎಚಾರದಲ್ಲಿ ಬಡೋದೆ ಮುಸ್ಲಿಮರಿಗೆ ಬಹಳ ಅಸಮಾಧಾನವೆತ್ತಿಂದೂ ಅದಕ್ಕಾಗಿ ಪಾಟೇಲರ ಬಹಿಷ್ಕಾರದ ಸಂಬಂಧ ಒಂದು ಮೆರವಣಿಗೆಯೇ ಏರ್ಪಾಡಾಗಿತ್ತೆಂದೂ ಈಚೆಗೆ ಒಂದು ರಾತ್ರಿ ಯಾರೋ ಅವರ ಮನೆಗೆ ಬೆಂಕಿ ಹಚ್ಚಿದರೆಂದೂ, ಆದರೆ ಅದನ್ನು ನೊಂದಿಸಲಾಯಿತೆಂದೂ ತಿಳಿದು ಬಂದಿದೆ.

ನರೇಂದ್ರ ಮಂಡಲದವರೂ ಬ್ರಿಟಿಷ್ ಮಂತ್ರಿಗಳೂ

ನರೇಂದ್ರ ಮಂಡಲದ ಪರವಾಗಿ ಅದರ ಛಾನ್ಸಲರ್‌ರಾದ ಭೂಪಾಳದ ನವಾಬರು ಬ್ರಿಟಿಷ್ ಮಂತ್ರಿಗಳನ್ನು ಭೇಟಿ ಮಾಡಿ ಒಂದು ಮೆಮೊರೇಂಡಮನ್ನು ಒಪ್ಪಿಸಿದ್ದಾರೆ.

ಬಿಹಾರ ಮಂತ್ರಿಮಂಡಲದ ಶಕ

ಬಿಹಾರಿನ ಕಾಂಗ್ರೆಸ್ ಮಂತ್ರಿಮಂಡಲ ಆಗಲೇ ರಾಜಭಕ್ತಿಯ ಪ್ರಮಾಣವನ್ನು ಪೂರೈಸಿ ತನ್ನ ಅಧಿಕಾರದ ಗದ್ದುಗೆಯನ್ನೇರಿದೆ. ಈ ಮಂತ್ರಿಮಂಡಲದ ಸನೆಯ ಮಂತ್ರಿಗಳಾದ ಶ್ರೀ. ಜಗಲಾಲ್ ಚೌಧರಿಯವರನ್ನು—ಇದುವರೆಗೆ ಬಂಕಿಪುರ ಜೈಲಲ್ಲಿ ಇದ್ದವರನ್ನು—ಬಿಡುಗಡೆ ಮಾಡಿರುವ ಪರಿಣಾಮವಾಗಿ ಅವರು ಬೇಗನೇ ತಮ್ಮ ಕಾರ್ಯಭಾರವನ್ನು ವಹಿಸಿಕೊಳ್ಳುವರು.

ಶ್ರೀ. ಚೌಧರಿಯವರ ಬಿಡುಗಡೆ ಕಾಲದಲ್ಲಿ ಅವರನ್ನು ಸ್ವಾಗತಿಸಲು ಪ್ರಧಾನ ಶ್ರೀ. ಶ್ರೀಕೃಷ್ಣ ಸಿಂಹರೂ ಇತರ ಮಂತ್ರಿಗಳೂ ಅಲ್ಲದೆ ಸಾವಿರಾರು ಮಂದಿ ಜನ ಸಾಮಾನ್ಯರೂ ಜೈಲಿನ ಗೇಟಿನ ಬಳಿ ಕಾದು ಕೊಂಡಿದ್ದರು

ಬೊಂಬಯಿ ಮಂತ್ರಿಮಂಡಲ

ಬೊಂಬಯಿ ಕಾಂಗ್ರೆಸ್ ಮಂತ್ರಿಮಂಡಲದವರಿವರು:—ಶ್ರೀ. ಬಿ. ಜಿ. ಖೇರ್ ಪ್ರಧಾನರು, ಶ್ರೀಗಳಾದ ಮೊರಾರ್ಜಿ ದೇಸಾಯಿ, ಡಾ। ಎಂ. ಡಿ. ಡಿ. ಗಿಲ್ಡರ್, ದಿನಕರ್ ರಾವ್ ಎನ್. ದೇಸಾಯಿ, ವೈಕುಂಠ ಎಲ್. ಮೇಥಾ, ಎಲ್. ಎಂ. ಪಾಟೀಲ್ ಗುಲ್ಜಾರಿಲಾಲ್ ನಂದಾ, ಎಂ. ಪಿ. ಪಾಟೀಲ್; ಗೋವಿಂದ ಡಿ. ವರ್ತಕ್, ಜಿ. ಡಿ. ತಪ್ಸೆ (ಹರಿಜನ) ಇವರು ಮಂತ್ರಿಗಳು. ಇನ್ನೊಬ್ಬ ಮುಸ್ಲಿಂ ಮಂತ್ರಿಗಳ ಹೆಸರನ್ನು ಬೇಗನೇ ಸೂಚಿಸಲಾಗುವುದು.

ಇರಾನಿನ ಮೇಲೆ ರಷ್ಯದ ಒತ್ತಾಯವೇ?

ರಷ್ಯ ಎನ್ನೂ ಇರಾನಿನಲ್ಲಿ ರಾಜಕೀಯ ಮತ್ತು ಆರ್ಥಿಕ ರಿಯಾಯಿತಿಗಳಿಗಾಗಿ ಒತ್ತಾಯಪಡಿಸುತ್ತಲೇ ಇದೆ ಎಂದು ಅಮೆರಿಕದ ವಾರ್ತೆ.

ಕೈರೋವಿಗೆ ಬ್ರಿಟಿಶರ ಶಿಷ್ಟ ಮಂಡಲ

ಬ್ರಿಟನ್ ಮತ್ತು ಈಜಿಪ್ಟಿನ ಕರಾರನ್ನು ಪುನರಾವರ್ತನಗೊಳಿಸಲು ಬೇಗನೇ ಬ್ರಿಟಿಶರದೊಂದು ಶಿಷ್ಟ ಮಂಡಲವು ಕೈರೊವಿಗೆ ಪ್ರಯಾಣ ಬೆಳೆಸಲಿದೆ.

ಬಿರುಗಾಳಿ ಭೂಕಂಪದ ಅನರ್ಥ

ಅಲಾಸ್ಕದ ಬಳಿ ಭೀಕರ ಸ್ವರೂಪದ ಬಿರುಗಾಳಿ ಭೂಕಂಪಗಳು ಉಂಟಾಗಿ ಆ ಪ್ರಾಂತದ ಸುಮಾರು ೧೦ ಸಾವಿರ ಮಂದಿ ಪ್ರಜೆಗಳು ಮನೆಮಾರು ಕಳೆದುಕೊಂಡ ನಿರ್ಗತಿಕರಾಗಿರುವರೆಂದು ವಾರ್ತೆ.

Notice as to Lost policies.

Policies Nos: 141661/166615/194386 in National Insurance Co., Ltd., on the life of Mr. K. Vittaldas Shenai, Advocate, Coondapoor, having been lost, notice is hereby given that failing any objection to reach the Company within one month from any interested party with production of the policies, the Company will proceed in pending matters concerning the policies.

S. N. Banerjea,
Ag. Manager
National Insurance Co., Ltd.
7, Council House Street, Calcutta.

The Annual Meeting of the Brahman Sev held at 5 P. 5th May of Sri- M req

1. Consideration of the Annual Rep statement of ac

2. Election o Managing Boa who retire un

3. Appointme for the year 1946

4. Any other bu may be admitted by the

U. Narayana
Pres

Office of the G. S. B. Seva Sa 7—4—1946.

ಕಜ್ಜಿ, ತುರಿ[illegible] ತುರಿಕಜ್ಜಿ, ಹುಳ ಉಪ್ಪ[illegible]ಹುಣ್ಣು, ವ್ರಣ [illegible]ವ್ಯಾಧಿಗಳಿಗೂ ಉ[illegible]ವ್ಯ

ಪಾತ್ರಿ ಬಣ್ಣದ ಆಧುನಿಕ ನಮೂನೆ
ಶ್ರೇಷ್ಠ ತರಗತಿ
80 ಮತ್ತು 100